# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜೂನ್ 17, 2022

ಸಂಪುಟ : 49 ಸಂಚಿಕೆ : 34 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





ಶಾಸಕ ಡಾ.ಶಾಮನೂರು ಶಿವಶಂಕರಪ್ಪನವರ 92ನೇ ಹುಟ್ಟುಹಬ್ಬವನ್ನು ಗುರುವಾರ ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಸ್ಸೆಸ್ ಅವರಿಗೆ ಕೇಕ್ ತಿನ್ನಿಸಿ ಅಭಿನಂದಿಸಿ, ಶುಭ ಹಾರೈಸಿದರು. ಉದ್ಯಮಿಗಳಾದ ಎಸ್.ಎಸ್. ಗಣೇಶ್, ಅಥಣಿ ಎಸ್.ವೀರಣ್ಣ, ಅಣಬೇರು ರಾಜಣ್ಣ ಹಾಗೂ ಇತರರು ಚಿತ್ರದಲ್ಲಿದ್ದಾರೆ.

# ಭದ್ರಾ ಮೇಲ್ದಂಡೆ ರಾಷ್ಟ್ರೀಯ ಯೋಜನೆ

**ಘೋಷಣೆಗೆ ಕೇಂದ್ರ ಸರ್ಕಾರದ ಒಪ್ಪಿಗೆ : ಸಚಿವ ಕಾರಜೋಳ**

ಬೆಂಗಳೂರು, ಜೂ.16 - ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ ಹೇಳಿದ್ದಾರೆ.

ದೆಹಲಿಗೆ ಭೇಟಿ ನೀಡಿರುವ ಕಾರಜೋಳ ಅವರು, ಕೇಂದ್ರ ಸರ್ಕಾರದ ವಿವಿಧ ಹಂತಗಳಲ್ಲಿ ಬಾಕಿ ಇರುವ ಕರ್ನಾಟಕದ ಪ್ರಸ್ತಾವನೆಗಳನ್ನು ಅನುಮೋದಿಸಲು, ಮಂಜೂರಿ ಪಡೆಯಲು ಹಲವಾರು ಕೇಂದ್ರದ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ.

ನಂತರ ಮಾತನಾಡಿದ ಅವರು, ಭದ್ರಾ ಮೇಲ್ದಂಡೆ ಯೋಜನೆಯು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಲು ಎಲ್ಲಾ ಅರ್ಹತೆ ಹೊಂದಿದೆ. ಈಗಾಗಲೇ ಅವಶ್ಯವಿರುವ ಎಲ್ಲ ಪೂರಕ ಅನುಮೋದನೆಗಳನ್ನು ಕೇಂದ್ರ ಜಲ ಆಯೋಗ ಮತ್ತು ಕೇಂದ್ರ ಸರ್ಕಾರದ ವಿವಿಧ ನಿರ್ದೇಶನಾಲಯಗಳಿಂದ ಪಡೆದುಕೊಂಡಿದೆ ಎಂದಿದ್ದಾರೆ.

ಕೇಂದ್ರದ ಜಲಶಕ್ತಿ ಸಚಿವಾಲಯ ನಡೆಸಿದ 2020ರ ಫೆಬ್ರವರಿಯಲ್ಲಿ ನಡೆಸಿದ14ನೇ ಉನ್ನತಾಧಿಕಾರ ಸಮಿತಿಯ ಸಭೆಯಲ್ಲಿ ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಸಚಿವ ಸಂಪುಟಕ್ಕೆ ಶಿಫಾರಸು ಮಾಡಿದೆ ಎಂದರು.

ಅತಿ ಶೀಘ್ರದಲ್ಲಿ ಕೇಂದ್ರ ಸಚಿವ ಸಂಪುಟ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಸಂಬಂಧಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಕೇಂದ್ರ ಜಲಸಂಪನ್ಮೂಲ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವರಿಕೆ ಮಾಡಲಾಗಿದೆ. ಕೇಂದ್ರ ಸರ್ಕಾರ ರಾಷ್ಟ್ರೀಯ ಯೋಜನೆಯಾಗಿ ಘೋಷಿಸಲು ಒಪ್ಪಿಗೆ ಸೂಚಿಸಿದ್ದಾರೆ. ಇದು ಕರ್ನಾಟಕದ ಮೊದಲನೆಯ ರಾಷ್ಟ್ರೀಯ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆಯು ಬೃಹತ್ ನೀರಾವರಿ ಯೋಜನೆಯಾಗಿದ್ದು 29.90 ಟಿಎಂಸಿ ನೀರಿನ ಬಳಕೆಯೊಂದಿಗೆ ( ತುಂಗಾ ನದಿಯಿಂದ 17.40 ಟಿಎಂಸಿ ಮತ್ತು ಭದ್ರಾ ಜಲಾಶಯದಿಂದ 12.50 ಟಿಎಂಸಿ ) ಚಿಕ್ಕಮಗಳೂರು, ಚಿತ್ರದುರ್ಗ ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳ 2,25,515 ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಮೂಲಕ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಉದ್ದೇಶ ಹೊಂದಿದೆ.

ಈ ಜಿಲ್ಲೆಗಳ 367 ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ. 50 ರಷ್ಟನ್ನು ತುಂಬಿಸುವ ಉದ್ದೇಶವೂ ಯೋಜನೆಗೆ ಇದೆ.

ಈ ಯೋಜನೆಗೆ ತಗಲುವ ಒಟ್ಟಾರೆ ವೆಚ್ಚವು 21,473.67 ಕೋಟಿ ರೂ.ಗಳಾಗಿದೆ. ರಾಷ್ಟ್ರೀಯ ಯೋಜನೆಯಾಗಿ ಪರಿಗಣಿತವಾದ ನಂತರ ಕೇಂದ್ರ ಸರ್ಕಾರ ಈ ಯೋಜನೆಗೆ 9675.29 ಕೋಟಿ ರೂ.ಗಳನ್ನು ಭರಿಸಲಿದೆ.

# ಕಾಂಗ್ರೆಸ್‌ನವರಿಗೆ ಜನರು 'ಮನೆಗೆ ಚಲೋ' ಮಾಡಲಿದ್ದಾರೆ : ಬೊಮ್ಮಾಯಿ

**ರಾಹುಲ್ ಗಾಂಧಿ ವಿಚಾರಣೆ ವಿರುದ್ಧ ನಡೆಸುತ್ತಿರುವ ಪ್ರತಿಭಟನೆಗೆ ಮುಖ್ಯಮಂತ್ರಿ ಬೊಮ್ಮಾಯಿ ಲೇವಡಿ**

ದಾವಣಗೆರೆ, ಜೂ. 16 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸುತ್ತಿರುವುದನ್ನು ವಿರೋಧಿಸಿ, ಕಾಂಗ್ರೆಸ್ ನಡೆಸುತ್ತಿರುವ ಪ್ರತಿಭಟನೆಗೆ ಲೇವಡಿ ಮಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜನರು ಕಾಂಗ್ರೆಸ್‌ನವರಿಗೆ 'ಮನೆಗೆ ಚಲೋ' ಮಾಡಲಿದ್ದಾರೆ ಎಂದಿದ್ದಾರೆ.

ಖಾಸಗಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಕಾನೂನು ಬಾಹಿರ ಭ್ರಷ್ಟಾಚಾರ ಪ್ರಕರಣದ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುತ್ತಿರುವುದು ಆ ಪಕ್ಷದ ದುರಂತ ಎಂದಿದ್ದಾರೆ.

ಅವರು ಈ ಥರ ಮಾಡಿದರೆ ಜನರು ಕಾಂಗ್ರೆಸ್‌ನವರಿಗೆ ಅವರವರ ಮನೆಗೆ ಚಲೋ ಮಾಡುತ್ತಾರೆ ಎಂದು ಮುಖ್ಯಮಂತ್ರಿ ಹೇಳಿದರು.

ಪಠ್ಯ ಪರಿಷ್ಕರಣೆ ವಿರುದ್ಧ ಕೆಲ ಸಾಹಿತಿಗಳು ಕುಪ್ಪಳ್ಳಿಯಿಂದ ಪಾದಯಾತ್ರೆ ನಡೆಸುತ್ತಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ಪರಿಷ್ಕರಣೆ ಕುರಿತು ಶಿಕ್ಷಣ ಸಚಿವ ನಾಗೇಶ್ ಅವರಿಗೆ ಈಗಾಗಲೇ ಸೂಚನೆ ನೀಡಿದ್ದೇನೆ. ಪಠ್ಯವನ್ನು ವೆಬ್ ತಾಣಕ್ಕೆ ಹಾಕಲಾಗಿದ್ದು, ಆಕ್ಷೇಪಗಳನ್ನು ನೀಡಬಹುದಾಗಿದೆ. ಪಠ್ಯದಲ್ಲಿ ತಪ್ಪುಗಳಿದ್ದರೆ ಸರಿಪಡಿಸಲು ನಮ್ಮ ಸರ್ಕಾರ ಮುಕ್ತವಾಗಿದೆ. ಹಿಂದಿನ ಹಾಗೂ ಈಗಿನ ಎರಡೂ ಪಠ್ಯಗಳಿಗೆ ಸಂಬಂಧಿಸಿದಂತೆ ಅಭಿಪ್ರಾಯಗಳು ವೆಬ್ ತಾಣದಲ್ಲಿ ಬರುತ್ತಿವೆ ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನಿರ್ಧಾರದವರೆಗೆ ಮೇಕೆದಾಟು ಕುರಿತು ಚರ್ಚೆ ನಡೆಸಬಾರದು ಎಂದು ತಮಿಳುನಾಡು ಒತ್ತಾಯಿಸಿರುವುದನ್ನು ತಳ್ಳಿ ಹಾಕಿರುವ ಬೊಮ್ಮಾಯಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಯಾವುದೇ ತಡೆಯಾಜ್ಞೆ (2ನೇ ಪುಟಕ್ಕೆ)

# ಅಗ್ನಿಪಥದ ವಿರುದ್ಧ ಹಿಂಸಾತ್ಮಕ ಪ್ರತಿಭಟನೆ

**ಬಿಜೆಪಿ ಮಹಿಳಾ ಶಾಸಕಿಗೆ ಗಾಯ ಬಿಹಾರದಲ್ಲಿ ರೈಲುಗಳಿಗೆ ಬೆಂಕಿ**

ಪಾಟ್ನಾ, ಜೂ. 16 – ಸೈನಿಕರ ನೇಮಕಕ್ಕೆ ರೂಪಿಸಲಾದ ಅಗ್ನಿಪಥ ಯೋಜನೆಯ ವಿರುದ್ಧ ಬಿಹಾರದಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದು, ರೈಲುಗಳಿಗೆ ಬೆಂಕಿ ಹಚ್ಚಲಾಗಿದೆ. ಬಸ್ಸುಗಳ ಗಾಜುಗಳನ್ನು ಒಡೆದು ಹಾಕಲಾಗಿದೆ ಮತ್ತು ಆಡಳಿತಾರೂಢ ಬಿಜೆಪಿ ಶಾಸಕರೊಬ್ಬರು ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದಾರೆ. ರೈಲುಗಳನ್ನು ತಡೆದು ರಸ್ತೆಯಲ್ಲಿ ಟೈರ್‌ಗಳನ್ನು ಸುಟ್ಟ ಘಟನೆಗಳೂ ನಡೆದಿವೆ. ದುಷ್ಕರ್ಮಿಗಳನ್ನು ಚೆದುರಿಸಲು ಪೊಲೀಸರು ಅಶ್ರುವಾಯು ಸಿಡಿಸಿದ್ದಾರೆ.

ನವಾಡಾದಲ್ಲಿ (2ನೇ ಪುಟಕ್ಕೆ)

# ನಾಯಕರ ನೇತೃತ್ವದಲ್ಲಿ ಅಲೆ ಸೃಷ್ಟಿ

## ಮೋದಿ ವರ್ಚಸ್ಸು ಬಳಕೆಗೆ ರಾಜ್ಯ ಬಿಜೆಪಿ ನಿರ್ಧಾರ

**ಮೋದಿ ಕಾರ್ಯಕ್ರಮವನ್ನು ರಾಜಕೀಯವಾಗಿ ಬಂಡವಾಳ ಮಾಡಿಕೊಳ್ಳಲು ಕಾರ್ಯಕರ್ತರಿಗೆ ಪಾಠ**

ಬೆಂಗಳೂರು, ಜೂ.16 - ಪ್ರಧಾನಿ ನರೇಂದ್ರ ಮೋದಿ ಅವರ ಎರಡು ದಿನಗಳ ರಾಜ್ಯ ಪ್ರವಾಸದಲ್ಲಿ ಬಿಜೆಪಿ ಪರವಾದ ಅಲೆ ಸೃಷ್ಟಿಸಲು ರಾಜ್ಯ ಘಟಕ ಮುಂದಾಗಿದೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದ ನಂತರ ಹಗರಣ ಮತ್ತು ಭ್ರಷ್ಟಾಚಾರದ ಆರೋಪ ಗಳಿಂದ ಪಕ್ಷ ಮತ್ತು ಸರ್ಕಾರಕ್ಕೆ ಹಿನ್ನಡೆಯಾಗಿದೆ.

ಪ್ರತಿ ಪಕ್ಷ ಕಾಂಗ್ರೆಸ್ ಮಾಡುತ್ತಿರುವ ಅಪಪ್ರಚಾರದಿಂದ ಪಕ್ಷ ಮತ್ತು ಸರ್ಕಾರಕ್ಕೆ ಭಾರೀ ಹಿನ್ನಡೆಯಾಗಿದೆ. ವಿಧಾನಸಭೆ ಚುನಾವಣೆಗೆ ಇನ್ನೂ ಕೇವಲ 9 ತಿಂಗಳು ಮಾತ್ರ ಬಾಕಿ ಉಳಿದಿದ್ದು, ಈ ಅಲ್ಪಾವಧಿಯಲ್ಲಿ ಜನರ ಮನಸ್ಸು ಗೆಲ್ಲಲು ಮೋದಿ ಅವರನ್ನೇ ಮುಂದಿಟ್ಟುಕೊಂಡು ಚುನಾವಣೆ ಎದುರಿಸುವುದು. ಚುನಾವಣೆ ಪೂರ್ವವಾಗಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿರುವ ಮೋದಿ ಅವರ ಈ ಭೇಟಿಯಿಂದಲೇ ಪಕ್ಷದ ಹವಾ ಸೃಷ್ಟಿಗೆ ರಾಜ್ಯ ನಾಯಕರು ಕಾರ್ಯಕ್ರಮ ರೂಪಿಸಿದ್ದಾರೆ.

ನಿನ್ನೆ ಅರಮನೆ ಆವರಣದಲ್ಲಿ ಮೋದಿ ಅವರ ಕಾರ್ಯಕ್ರಮವನ್ನು ರಾಜಕೀಯವಾಗಿ ಬಂಡವಾಳ ಮಾಡಿಕೊಳ್ಳಲು ಬಳಸಿಕೊಳ್ಳುವ ಸಂಬಂಧ ಆರ್.ಎಸ್.ಎಸ್. ಮತ್ತು ಬಿಜೆಪಿ ನಾಯಕರು ಮುಂಚೂಣಿ ಕಾರ್ಯಕರ್ತರಿಗೆ ಪಾಠ ಮಾಡಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿದಂತೆ ಹಲವು ಮುಖಂಡರು ನಿನ್ನೆ ಸಭೆಯಲ್ಲಿ ಭಾಗಿಯಾಗಿದ್ದರು. ಜೂ.20, 21ರಂದು ಎರಡು ದಿನಗಳ ಕಾಲ ಬೆಂಗಳೂರು ಮತ್ತು ಮೈಸೂರಿನಲ್ಲಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಪ್ರಧಾನಿ ಅವರೇ ರಾಜ್ಯದ ಮತದಾರರ ಮನ ಗೆಲ್ಲಲು ಅವರೇ ಕೆಲವು ಕಾರ್ಯಕ್ರಮ ರೂಪಿಸಿದ್ದಾರೆ. ಇದರ ಜತೆಗೆ ರಾಜ್ಯ ಘಟಕ ಇತ್ತೀಚೆಗೆ ಕಳೆದುಕೊಂಡಿರುವ ವರ್ಚಸ್ಸನ್ನು ಮರು ಸ್ಥಾಪಿಸಲು ಈ ಕಾರ್ಯಕ್ರಮಗಳನ್ನೇ ಬಂಡವಾಳ ವನ್ನಾಗಿ ಬಳಸಿಕೊಳ್ಳುವ ಯೋಜನೆ ರೂಪಿಸಿದೆ. ಪ್ರಧಾನಿ ಅವರು ಮೈಸೂರಿನಲ್ಲಿ ಕಾರ್ಯಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಬಿಂಬಿಸಿ ಪಕ್ಷದ ವರ್ಚಸ್ಸು ವೃದ್ಧಿಗೆ ಕಾರ್ಯಕರ್ತರು ಈಗಿನಿಂದಲೇ ಸಜ್ಜಾಗುವಂತೆ ಸೂಚಿಸಲಾಗಿದೆ. ಇನ್ನೂ ಮುಂದೆ ಪ್ರತಿ ತಿಂಗಳು ಚುನಾವಣೆ ಮುಗಿಯುವವರೆಗೂ ರಾಷ್ಟ್ರೀಯ ನಾಯಕರು ಒಂದಲ್ಲಾ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯಕ್ಕೆ ಧಾವಿಸಲಿದ್ದಾರೆ.

# ನಾಲ್ಕು ದಶಕಗಳ ನಂತರ ದಕ್ಷಿಣ ಪದವೀಧರ ಕ್ಷೇತ್ರ ಕಾಂಗ್ರೆಸ್‌ಗೆ

**ಶಿಕ್ಷಕರು, ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲಿ ಕಾಂಗ್ರೆಸ್ - ಬಿಜೆಪಿಗೆ ತಲಾ 2 ಸ್ಥಾನ**

ಬೆಂಗಳೂರು, ಜೂ. 16 - ನಾಲ್ಕು ದಶಕಗಳ ನಂತರ ದಕ್ಷಿಣ ಪದವೀಧರ ಕ್ಷೇತ್ರ ಕಾಂಗ್ರೆಸ್ ತೆಕ್ಕೆಗೆ ಬಂದಿದೆ.

ಜನತಾ ಪರಿವಾರ ಹಾಗೂ ಬಿಜೆಪಿ ಈ ಕ್ಷೇತ್ರದಲ್ಲಿ ಸ್ಥಾಪಿಸಿದ್ದ ಅಧಿಪತ್ಯವನ್ನು ಕಾಂಗ್ರೆಸ್ ಅಭ್ಯರ್ಥಿ ಮಧು ಮಾದೇಗೌಡ ಅಂತ್ಯಗೊಳಿಸಿದ್ದಾರೆ.

ಕಳೆದ 13ರಂದು ಶಿಕ್ಷಕರು ಮತ್ತು ಪದವೀಧರರ ನಾಲ್ಕು ಕ್ಷೇತ್ರಗಳಿಗೆ ನಡೆದ ಚುನಾವಣೆ ಫಲಿತಾಂಶ ಪೂರ್ಣವಾಗಿ ಪ್ರಕಟವಾಗಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ತಲಾ ಎರಡು ಸ್ಥಾನಗಳನ್ನು ಪಡೆದು ಸಮಬಲ ಪ್ರದರ್ಶಿಸಿದರೆ, ಜೆಡಿಎಸ್ ಹೀನಾಯ ಸೋಲು ಅನುಭವಿಸಿದೆ.

ದಕ್ಷಿಣ ಪದವೀಧರರ ಕ್ಷೇತ್ರದ ಫಲಿತಾಂಶ ಗುರುವಾರ ಮಧ್ಯಾಹ್ನ ಪ್ರಕಟಗೊಂಡು ಅಂತಿಮವಾಗಿ ಮಧು ಮಾದೇಗೌಡ ಗೆಲುವಿನ ಗುರಿ ಮುಟ್ಟಲು 808 ಮತಗಳ ಕೊರತೆ ಇದ್ದರೂ ಉಳಿದ ಅಭ್ಯರ್ಥಿಗಳು ಎಲಿಮಿನೇಟ್ ಆದ್ದರಿಂದ 45,275 ಮತ ಪಡೆದು ಗೆಲುವಿನ ನಗೆ ಬೀರಿದರು. ಈ ಗೆಲುವು ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷದ ಚೇತರಿಕೆಗೆ ಸಹಕಾರಿಯಾಗಲಿದೆ.



ದಾವಣಗೆರೆಯ ಬಿಐಇಟಿ ಕಾಲೇಜು ಆವರಣದಲ್ಲಿ ಶ್ರೀ ಪಶುಪತಿನಾಥ ದೇವಸ್ಥಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಉದ್ಯಮಿ ಎಸ್.ಎಸ್. ಗಣೇಶ್, ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಉಪಸ್ಥಿತರಿದ್ದರು.

# ನಗರದ 19 ಕೇಂದ್ರಗಳಲ್ಲಿ ನೆರವೇರಿದ ಸಿಇಟಿ ಪರೀಕ್ಷೆ

**ಗಣಿತಕ್ಕೆ 9,035 ಹಾಗೂ ಜೀವಶಾಸ್ತ್ರಕ್ಕೆ 8,492 ವಿದ್ಯಾರ್ಥಿಗಳ ಹಾಜರಿ**

ದಾವಣಗೆರೆ, ಜೂ. 16 – ಇಂಜಿನಿಯರಿಂಗ್, ಕೃಷಿ, ಪಶುವೈದ್ಯಕೀಯ ಫಾರ್ಮಸಿ ಮುಂತಾದ ವೃತ್ತಿಪರ ಕೋರ್ಸ್‌ಗಳಿಗೆ ನಡೆಸಲಾಗುವ ಸಿ.ಇ.ಟಿ. (ಸಾಮಾನ್ಯ ಪ್ರವೇಶ) ಪರೀಕ್ಷೆ ನಗರದ 19 ಕೇಂದ್ರಗಳಲ್ಲಿ ಗುರುವಾರದಂದು ನೆರವೇರಿದೆ.

ಮೊದಲ ದಿನದಂದು ಜೀವಶಾಸ್ತ್ರ ಹಾಗೂ ಗಣಿತ ವಿಷಯಗಳ ಪರೀಕ್ಷೆ ನೆರವೇರಿದೆ. ನಾಳೆ ಶುಕ್ರವಾರ ಭೌತಶಾಸ್ತ್ರ ಹಾಗೂ ರಸಾಯನಶಾಸ್ತ್ರ ವಿಷಯಗಳ ಪರೀಕ್ಷೆ ನಡೆಯಲಿದೆ.

ಗುರುವಾರ ಬೆಳಿಗ್ಗೆ 10.30ರಿಂದ ನಡೆದ ಜೀವಶಾಸ್ತ್ರ ಪರೀಕ್ಷೆಗೆ 9,153 ವಿದ್ಯಾರ್ಥಿಗಳ ಪೈಕಿ 661 ವಿದ್ಯಾರ್ಥಿಗಳು ಗೈರಾಗಿದ್ದಾರೆ. 8,492 ವಿದ್ಯಾರ್ಥಿಗಳು ಹಾಜರಾಗಿದ್ದಾರೆ.


ಮಧ್ಯಾಹ್ನ 2.30ರಿಂದ ನಡೆದ ಗಣಿತ ಪರೀಕ್ಷೆಗೆ 9,153 ವಿದ್ಯಾರ್ಥಿಗಳ ಪೈಕಿ 118 ವಿದ್ಯಾರ್ಥಿಗಳು ಗೈರಾಗಿದ್ದಾರೆ. 9,035 ವಿದ್ಯಾರ್ಥಿಗಳು ಹಾಜರಾಗಿದ್ದಾರೆ ಎಂದು ಡಿ.ಡಿ.ಪಿ.ಯು. ಎಂ. ಶಿವರಾಜು ತಿಳಿಸಿದ್ದಾರೆ.

# ಪಾಕಿಸ್ತಾನದಲ್ಲಿ ಇಂಧನ ಬೆಲೆ ಶೇ.29 ರವರೆಗೆ ಏರಿಕೆ

ಇಸ್ಲಾಮಾಬಾದ್, ಜೂ. 16 – ಪಾಕಿಸ್ತಾನ ಸರ್ಕಾರ ತನ್ನ ಇಂಧನದ ಬೆಲೆಯನ್ನು ಶೇ.29ರವರೆಗೆ ಭಾರೀ ಏರಿಕೆ ಮಾಡಿದೆ. ವಿತ್ತೀಯ ಕೊರತೆ ಕಡಿಮೆ ಮಾಡಲು ಹಾಗೂ ಐ.ಎಂ.ಎಫ್.ನಿಂದ ಸಾಲ ಪಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಶೆಬಾಜ್ ಷರೀಫ್ ಅವರು ಪ್ರಧಾನ ಮಂತ್ರಿಯಾದ ನಂತರ ಮೂರನೇ ಬಾರಿಗೆ ಸಬ್ಸಿಡಿ ಕಡಿತ ಮಾಡುವ ಮೂಲಕ ಬೆಲೆ ಏರಿಕೆ ಮಾಡಲಾಗುತ್ತಿದೆ.

ಪೆಟ್ರೋಲ್ ಬೆಲೆಯಲ್ಲಿ 24 ರೂ. ಹಾಗೂ (2ನೇ ಪುಟಕ್ಕೆ)




## ಎಸ್ಸೆಸ್ ಹುಟ್ಟುಹಬ್ಬ : ಜಜಮು ವೈದ್ಯಕೀಯ ವಿದ್ಯಾಲಯದಲ್ಲಿ ರಕ್ತ ದಾನ ಶಿಬಿರ, ವನಮಹೋತ್ಸವ




ದಾವಣಗೆರೆ, ಜೂ.16- ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಯೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ 92ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಜಜಮು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬಾಪೂಜಿ ಆಸ್ಪತ್ರೆ ವತಿಯಿಂದ ಸ್ವಯಂಪ್ರೇರಿತ ರಕ್ತ ದಾನ ಶಿಬಿರ ಮತ್ತು ಸಸಿ ನೆಡುವ ಕಾರ್ಯಕ್ರಮವನ್ನು ಜಜಮು ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಇಂದು ನಡೆಸಲಾಯಿತು.

ಎಸ್ಸೆಸ್ ಅವರು ರಕ್ತದಾನ ಶಿಬಿರಕ್ಕೆ ಭೇಟಿ ನೀಡಿ ಶುಭ ಹಾರೈಸಿದರು. ಜಜಮು ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್, ಕಾಲೇಜಿನ ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# 'ರಗಳೆ' ಸಾಹಿತ್ಯ ಪ್ರಕಾರಕ್ಕೆ ನಾಂದಿ ಹಾಡಿದ್ದೇ 'ಹರಿಹರ'

## ಮಹಾಕವಿ ಹರಿಹರ ಜಯಂತಿ ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ವ್ಯಾಖ್ಯಾನ

ಸಾಣೇಹಳ್ಳಿ, ಜೂ.16- ಮಹಾಕವಿ ಹರಿಹರ ಕನ್ನಡದ ಬಹುದೊಡ್ಡ ಶ್ರೇಷ್ಠ ಕವಿ. ಕನ್ನಡ ಸಾಹಿತ್ಯದಲ್ಲಿ 'ರಗಳೆ' ಎನ್ನುವ ಸಾಹಿತ್ಯ ಪ್ರಕಾರಕ್ಕೆ ನಾಂದಿ ಹಾಡಿದವರು. ಮಹತ್ವದ 108 ರಗಳೆಗಳನ್ನು ರಚಿಸಿ 'ರಗಳೆಯ ಕವಿ'ಯೆಂದೇ ಖ್ಯಾತಿ ಪಡೆದಿದ್ದಾರೆ. ಅವರ 'ಬಸವರಾಜ ದೇವರ ರಗಳೆ' ಮತ್ತು 'ತಿರುನೀಲಕಂಠರ ರಗಳೆ' ಬಹು ಮಹತ್ವದವು ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಇಲ್ಲಿನ ಶ್ರೀ ಶಿವಕುಮಾರ ರಂಗಮಂದಿರದಲ್ಲಿ ಆಯೋಜಿಸಿದ್ದ 'ಮಹಾಕವಿ ಹರಿಹರ ಜಯಂತಿ'ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಹರಿಹರನ ಎಲ್ಲ ಕೃತಿ ರಚನೆಯ ಮೂಲ ಉದ್ದೇಶ ಸತ್ಯ ಪ್ರತಿಪಾದನೆ ಮಾಡುವಂಥದ್ದು. ಮನುಜರ ಮೇಲೆ, ಸ್ಥಾವರದ ಮೇಲೆ ತಾನು ಕಾವ್ಯ ರಚಿಸುವುದಿಲ್ಲ ಎನ್ನುವುದು ಆತನ ಪ್ರತಿಜ್ಞೆಯಾಗಿತ್ತು. ರಾಜರನ್ನು ಹೊಗಳಿ ಅವರ ಆಶ್ರಯದಲ್ಲಿ ಸುಖವಾಗಿ ಬಾಳದೆ ಸಾಮಾನ್ಯರಾದ ಸಾತ್ವಿಕ ಜನರನ್ನೇ ತನ್ನ ಕೃತಿಯ ಕೇಂದ್ರ ಬಿಂದುವಾಗಿಸಿಕೊಂಡು ಸಾಹಿತ್ಯ ರಚಿಸಿರುವುದು ಈಗಿನ ಸಾಹಿತಿಗಳಿಗೂ ಮಾದರಿಯಾದುದು.

ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಮಾದಾರ ಚೆನ್ನಯ್ಯ, ಕುಂಬಾರ ಗುಂಡಯ್ಯ ಮುಂತಾದ ಶರಣರ ಬಗ್ಗೆ ತನ್ನ ರಗಳೆಗಳಲ್ಲಿ ಪ್ರಸ್ತಾಪಿಸಿರುವುದು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. 'ಕೋಳೂರು ಕೊಡಗೂಸು' ರಗಳೆಯಲ್ಲಿ ಮಗುವಿನ ಮುಗ್ಧ ಭಕ್ತಿಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಪುಷ್ಪ, ವಿಭೂತಿ, ರುದ್ರಾಕ್ಷಿಯಂಥ ವಸ್ತುಗಳನ್ನು ಕುರಿತು ಕೂಡ ರಗಳೆಗಳನ್ನು ರಚಿಸಿದ್ದಾರೆ. ಇಂಥ ರಗಳೆಗಳನ್ನು ವಿದ್ಯಾರ್ಥಿಗಳು ಆಸಕ್ತಿಯಿಂದ ಅಭ್ಯಸಿಸಬೇಕು ಎಂದು ಸ್ವಾಮೀಜಿಗಳು ತಿಳಿಸಿದರು.

ಕವಿ ಹರಿಹರನ ಕುರಿತು ಕನ್ನಡ ಅಧ್ಯಾಪಕ ಎ. ಆರ್. ತಿಪ್ಪೇಸ್ವಾಮಿ ಮಾತನಾಡಿ, ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಸಿರಿಗೆರೆಯಲ್ಲಿ



'ಮಹಾಕವಿ ಹರಿಹರ ಜಯಂತಿ'ಯ ಆಚರಣೆಯನ್ನು ಜಾರಿಗೆ ತಂದರು. ಇದೇ ಪರಂಪರೆಯನ್ನು ಪಂಡಿತಾರಾಧ್ಯ ಶ್ರೀಗಳು ಸಾಣೇಹಳ್ಳಿಯಲ್ಲಿ ಮುಂದುವರಿಸಿದ್ದಾರೆ ಎಂದರು.

ಹರಿಹರನ ಶತಕದ್ವಯವು ಪ್ರಮುಖವಾಗಿ ಆತನ ಆತ್ಮಕಥನಗಳೇ ಆಗಿವೆ. ಗಿರಿಜಾ ಕಲ್ಯಾಣವು ಹರಿಹರನ ಮಹೋನ್ನತ ಚಂಪೂ ಕಾವ್ಯವಾಗಿದೆ. ಆವರೆಗಿನ ಕನ್ನಡ ಚಂಪೂ ಕೃತಿಗಳಲ್ಲಿ ಕಾಣದ ಕಥಾ ವಿಷಯವು ಇಲ್ಲಿದೆ. ಶೈವ ಪುರಾಣಗಳಲ್ಲಿ ಕಂಡು ಬರುವ ಶಿವಪಾರ್ವತಿಯರ ವಿವಾಹದ ಕಥೆ ಗಿರಿಜಾ ಕಲ್ಯಾಣದ ವಸ್ತು. ಗಿರಿಜೆಯ ಜನನದಿಂದ ಶಿವನೊಡನೆ ಅವಳ ವಿವಾಹದವರೆಗೆ ಮನೋಜ್ಞವಾಗಿ ಅವಳ ಸೌಂದರ್ಯ, ಸೊಬಗು, ಭಕ್ತಿಯ ಕಠೋರತೆ ಇವುಗಳನ್ನು ಸೂಕ್ಷ್ಮವಾಗಿ ಕವಿಯು ಚಿತ್ರಿಸಿದ್ದಾನೆ. ಗಿರಿಜಾ ಕಲ್ಯಾಣ ಎಂಬ ಚಂಪೂಕಾವ್ಯ, ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ ಹರಿಹರನ ಪ್ರಮುಖ ಕೃತಿಗಳು.ಸಾಮಾನ್ಯ ವ್ಯಕ್ತಿಗಳನ್ನೇ ತನ್ನ ಕೃತಿಯ ನಾಯಕರನ್ನಾಗಿ ಚಿತ್ರಿಸಿರುವುದು ವಿಶೇಷ. ಬಸವಣ್ಣನವರ ಕುರಿತ 'ಬಸವರಾಜ ದೇವರ ರಗಳೆ' ಬಸವಣ್ಣನ ಬಗ್ಗೆ ವಿಸ್ತೃತ, ವಿಶೇಷವಾದ ಮಾಹಿತಿಯನ್ನು ಒದಗಿಸುತ್ತದೆ ಎಂದರು.

ಸಂಗೀತ ಶಿಕ್ಷಕ ಹೆಚ್. ಎಸ್. ನಾಗರಾಜ್ ಮತ್ತು ತಬಲ ಸಾಥಿ ಶರಣ್ ವಚನಗೀತೆ ಮತ್ತು ಹರಿಹರನ 'ತಿರುನೀಲಕಂಠ ರಗಳೆ'ಯ ಕೆಲ ಭಾಗಗಳನ್ನು ಹಾಡಿದರು.

ಅಧ್ಯಾಪಕರಾದ ಸುಧಾ ಕಾರ್ಯಕ್ರಮ ನಿರೂಪಿಸಿದರು.

## ಹರಿಹರ ತಾಲ್ಲೂಕು ಪತ್ರಕರ್ತರ ಸಂಘದ ಚುನಾವಣಾ ಪ್ರಕ್ರಿಯೆ ಆರಂಭ



ಹರಿಹರ, ಜೂ. 16- ಹರಿಹರ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿಯ 2022-25 ರ ಸಾಲಿನ ಚುನಾವಣೆ ಪ್ರಕ್ರಿಯೆ ಆರಂಭಗೊಂಡಿದೆ.

ರಾಜ್ಯ ಪತ್ರಕರ್ತರ ಸಂಘದ ಆದೇಶದಂತೆ ದಾವಣಗೆರೆ ಜಿಲ್ಲಾ ಘಟಕವು ಹರಿಹರ ತಾಲ್ಲೂಕು ಪತ್ರಕರ್ತರ ಚುನಾವಣೆ ನಡೆಸಲು ಚುನಾವಣೆ ಅಧಿಕಾರಿಗಳನ್ನಾಗಿ ಎನ್.ಆರ್. ರವಿ ಮತ್ತು ಜೆ.ಎಸ್. ವೀರೇಶ್ ಅವರುಗಳನ್ನು ನೇಮಕ ಮಾಡಿದ್ದು, ಅವರು ನಗರದ ಪತ್ರಕರ್ತರ ಕಚೇರಿಗೆ ಆಗಮಿಸಿ ಚುನಾವಣೆ ಪ್ರಕ್ರಿಯೆ ಆರಂಭಿಸಿದ್ದಾರೆ.

ಚುನಾವಣೆ ನೀತಿ ನಿಬಂಧನೆಗಳನ್ನು ಹರಿಹರ ತಾಲ್ಲೂಕು ಪತ್ರಕರ್ತ ಸದಸ್ಯರ ಗಮನಕ್ಕೆ ತಂದು, ಹರಿಹರ ತಾಲ್ಲೂಕಿನ ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಖಜಾಂಚಿ ಮತ್ತು 4 ಸದಸ್ಯರ ಸ್ಥಾನಕ್ಕೆ ಇದೇ ದಿನಾಂಕ 26 ರ ಭಾನುವಾರ ಚುನಾವಣೆ ನಡೆಯಲಿದೆ.

ಈ ಸಂದರ್ಭದಲ್ಲಿ ಹರಿಹರ ತಾಲ್ಲೂಕು ಕಾರ್ಯನಿರತ ಪತ್ರಕರ್ತರಾದ ಟಿ. ಇನಾಯತ್, ಹೆಚ್.ಸಿ. ಕೀರ್ತಿಕುಮಾರ್, ಶೇಖರಗೌಡ ಪಾಟೀಲ್, ಎಂ. ಚಿದಾನಂದ ಕಂಚಿಕೇರಿ, ಕೆ. ಜೈಮುನಿ, ಸುರೇಶ್ ಕುಣೆಬೆಳಕೇರಿ, ಶ್ರೀಮತಿ ಶಾಂಭವಿ, ಹೆಚ್.ಸುಧಾಕರ್, ಆರ್. ಮಂಜುನಾಥ್, ಹೆಚ್. ಶಿವಪ್ಪ, ಚಂದ್ರಣ್ಣ , ವೈ. ನಾಗರಾಜ್, ಕೃಷ್ಣ ರಾಜೊಳ್ಳಿ, ಪ್ರವೀಣ್ ಆರ್.ಬಿ. ಹೆಚ್. ಮಂಜಾನಾಯ್ಕ್, ಜಿ.ಎನ್. ಕುಮಾರ್, ವಿಶ್ವನಾಥ್ ಮೈಲಾಳ, ಮಂಜುನಾಥ್ ರಾಜನಹಳ್ಳಿ, ಮಂಜುನಾಥ್, ಪೂಜಾರ್ ಹಾಜರಿದ್ದರು.

## ಅಗ್ನಿಪಥ : ಉತ್ತರದ ರಾಜ್ಯಗಳಲ್ಲಿ ಭುಗಿಲೆದ್ದ ಪ್ರತಿಭಟನೆ

ನವದೆಹಲಿ, ಜೂ. 16 – ಸೈನ್ಯದ ನೇಮಕದಲ್ಲಿ ಬದಲಾವಣೆ ತರುವ ಅಗ್ನಿಪಥ ಯೋಜನೆಯ ವಿರುದ್ಧ ಬಿಹಾರ ಸೇರಿದಂತೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಪ್ರತಿಭಟನೆ ಭುಗಿಲೆದ್ದಿದೆ. ದುಷ್ಕರ್ಮಿಗಳು ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳಿಗೆ ಹಾನಿ ಮಾಡಿದ್ದಾರೆ.

ಬಿಹಾರದಲ್ಲಿ ಅತಿ ಹೆಚ್ಚಿನ ಹಿಂಸಾಚಾರ ಉಂಟಾಗಿದ್ದು, ರೈಲುಗಳಿಗೆ ಬೆಂಕಿ ಹಚ್ಚಲಾಗಿದೆ. ಬಸ್‌ಗಳನ್ನು ಧ್ವಂಸಗೊಳಿಸಿದ್ದರೆ, ಆಡಳಿತಾರೂಢ ಬಿಜೆಪಿ ಶಾಸಕಿಯೊಬ್ಬರ ವಾಹನದ ಮೇಲೆ ಕಲ್ಲು ತೂರಿ ಗಾಯಗೊಳಿಸಲಾಗಿದೆ.

ಭಭುವಾ ಹಾಗೂ ಛಾಪ್ರಾ ನಿಲ್ದಾಣಗಳಲ್ಲಿ ರೈಲ್ವೆ ಆಸ್ತಿಗಳನ್ನು ಧ್ವಂಸಗೊಳಿಸಿ, ನಿಂತಿದ್ದ ಬೋಗಿಗಳಿಗೆ ಬೆಂಕಿ ಹಚ್ಚಲಾಗಿದೆ. ಪಲ್ವಾಲ್‌ನಲ್ಲಿ ಸರ್ಕಾರಿ ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. ಹಿಂಸೆ ನಡೆಸಿದ 20 ದುಷ್ಕರ್ಮಿಗಳನ್ನು ಬಂಧಿಸಲಾಗಿದೆ.

ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿ ರೈಲ್ವೆ ನಿಲ್ದಾಣದ ಬಳಿ ಅಂಗಡಿಗಳಿಗೆ ಕಲ್ಲು ತೂರಿ ಬೆಂಕಿ ಹಚ್ಚಲಾಗಿದೆ.

ಉತ್ತರ ಪ್ರದೇಶದ ಆಗ್ರಾದಲ್ಲಿ ಬಸ್ ಒಂದಕ್ಕೆ ಕಲ್ಲು ತೂರಲಾಗಿದೆ. ಬುಲಂದ್‌ಶಹರ್ ಹಾಗೂ ಬಲ್ಲಿಯಾ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ.

ರಾಜಸ್ಥಾನದ ಜೋಧಪುರ, ಸಿಕರ್, ಜೈಪರು, ನಗೌರ್, ಅಜ್ಮೀರ್ ಹಾಗೂ ಝುನ್‌ಝುನುಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ. ಆದರೆ, ಇಲ್ಲೆಲ್ಲೂ ಹಿಂಸಾಚಾರ ಕಂಡು ಬಂದಿಲ್ಲ.

ಹಿಂಸಾಚಾರದ ಹಿನ್ನಲೆಯೆಲ್ಲಿ 34 ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ ಎಂದು ನವದೆಹಲಿಯಲ್ಲಿ ರೈಲ್ವೆ ಮೂಲಗಳು ತಿಳಿಸಿವೆ.

## ಜರೀಕಟ್ಟೆಯಲ್ಲಿ ನಾಳೆ ಗ್ರಾಮ ವಾಸ್ತವ್ಯ

ದಾವಣಗೆರೆ, ಜೂ.16- ತಾಲ್ಲೂಕಿನ ತಹಶೀಲ್ದಾರ್‌ರವರು ಒಳಗೊಂಡಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ದಾವಣಗೆರೆ ತಾಲ್ಲೂಕು ಕಸಬಾ ದಕ್ಷಿಣ ಹೋಬಳಿ ಜರೀಕಟ್ಟೆ ಗ್ರಾಮಕ್ಕೆ ಇದೇ ದಿನಾಂಕ 18ರ ಶನಿವಾರ ಭೇಟಿ ನೀಡಿ ಗ್ರಾಮ ವಾಸ್ತವ್ಯ ಮಾಡುವರು. ಜರೀಕಟ್ಟೆ ಗ್ರಾಮದ ಸಾರ್ವಜನಿಕರು ತಮ್ಮ ಕುಂದು-ಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ದಾವಣಗೆರೆ ತಹಶೀಲ್ದಾರ್ ಬಸನಗೌಡ ಕೋಟೂರ ತಿಳಿಸಿದ್ದಾರೆ.

# ಪೋಷಕರು ಮಕ್ಕಳಿಗೆ ಸನ್ಮಾರ್ಗದ ಶಿಕ್ಷಣ ನೀಡಬೇಕು

## ಹರಪನಹಳ್ಳಿಯಲ್ಲಿ ಕಾನೂನು ಅರಿವು ಕಾರ್ಯಕ್ರಮದಲ್ಲಿ ನ್ಯಾ.ಎ.ಭಾರತಿ ಸಲಹೆ



ಹರಪನಹಳ್ಳಿ, ಜೂ.16- ಪೋಷಕರು ಮಕ್ಕಳನ್ನು ಅಜ್ಞಾನ ಶಿಕ್ಷಣದ ಕಡೆಗೆ ಕೊಂಡೊಯ್ಯದೇ ಮಾದರಿಯ ಶಿಕ್ಷಣವನ್ನು ನೀಡಿ ಸಮಾಜದಲ್ಲಿ ಉತ್ತಮ ನಾಗರಿಕರನ್ನಾಗಿ ಮಾಡಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎ.ಭಾರತಿ ಕರೆ ನೀಡಿದರು.

ತಾಲ್ಲೂಕಿನ ಅನಂತಹಳ್ಳಿ ಗ್ರಾಮದ ಸಮೀಪ ದಲ್ಲಿರುವ ಆದರ್ಶ ವಿದ್ಯಾಲಯದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ, ಹಾಗೂ ಕಾರ್ಮಿಕ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕುರಿತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಸಂದರ್ಭದಲ್ಲಿ ಪೋಷಕರು ಯಾವುದೇ ದುರಾಲೋಚನೆಗೆ ಒಳಗಾಗಿ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೇ ಅವರಿಗೆ ಉತ್ತಮ ಶಿಕ್ಷಣ ನೀಡಿ ಸಂಸ್ಕಾರವನ್ನು ಕಲಿಸಿರಿ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಮಂಗನ ಮನಸ್ಸಿನಂತೆ ವಿಚಲಿತರಾಗದೇ ಸೃಜನಶೀಲ ವ್ಯಕ್ತಿಯಾಗಿ ಉನ್ನತ ಶಿಕ್ಷಣವನ್ನು ಪಡೆದು ತಂದೆ-ತಾಯಿಗೆ ಮಾದರಿ ಮಕ್ಕಳಾಗಿ ಸಮಾಜದಲ್ಲಿ ಒಳ್ಳೆಯ ಸನ್ಮಾರ್ಗದಲ್ಲಿ ಹೋಗಬೇಕು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಏಕಾಗ್ರತೆ ಬಹಳ ಮುಖ್ಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ ನಿರೀಕ್ಷಕ ಆರ್.ನಾಗೇಶ್ ಮಾತನಾಡಿದರು. ವಕೀಲರ ಸಂಘದ ಉಪಾಧ್ಯಕ್ಷ ಡಿ.ಬಿ.ವಾಸುದೇವ, ಕಾರ್ಯದರ್ಶಿ ಎಸ್.ಜಿ. ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿ ಎಂ.ನಾಗೇಂದ್ರಪ್ಪ, ವಕೀಲರಾದ ಎಂ.ಮೃತ್ಯುಂಜಯ, ಕೆ.ಸಣ್ಣ ನಿಂಗನಗೌಡ, ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ಹೆಚ್. ಕೆ.ಚಂದ್ರಪ್ಪ, ತಾಲ್ಲೂಕು ಕಾನೂನು ಸೇವಾ ಸಮಿತಿಯ ಕೊಟ್ರೇಶ್, ಬಸವರಾಜ್, ಮತ್ತು ಆದರ್ಶ ಹಾಜರಿದ್ದರು.

## ಸಾವಿರಾರು ಮಕ್ಕಳಿಗೆ ಕೃತಜ್ಞತಾ ಟ್ರಸ್ಟ್ ಸಹಾಯ ಮಾಡುವಂತಾಗಿದೆ



ಮಲೇಬೆನ್ನೂರು

ಮಲೇಬೆನ್ನೂರು, ಜೂ.16- ಮೂರು ಮಕ್ಕಳಿಗೆ ಸಹಾಯ ಮಾಡುವ ಆಸೆ, ಇಂದು ನಲವತ್ತು ಸಾವಿರ ಮಕ್ಕಳಿಗೆ ನೆರವು ಮಾಡುವಂತಾಗಿದೆ ಎಂದು ಬೆಂಗಳೂರಿನ ಕೃತಜ್ಞತಾ ಟ್ರಸ್ಟನ ಮುಖ್ಯಸ್ಥರಾದ ಅರುಣಾ ದಿವಾಕರ್ ತಿಳಿಸಿದರು.

ಇಲ್ಲಿಗೆ ಸಮೀಪದ ಧುಳೆಹೊಳೆ ಗ್ರಾಮದ ಜಿಎಂಸಿಜಿ ಪ್ರೌಢಶಾಲಾ ಆವರಣದಲ್ಲಿ ಇಂದು ಏರ್ಪಡಿಸಿದ್ದ ವಿವಿಧ ಶಾಲೆಗಳ ಮಕ್ಕಳಿಗೆ ನೋಟ್‌ಬುಕ್, ಲೇಖನ ಸಾಮಾಗ್ರಿಗಳನ್ನು ವಿತರಿಸಿ ಮಾತನಾಡಿದ ಅವರು, ನಾಗರಹೊಳೆ, ಬೆಂಗಳೂರಿನ ಎರಡು ಶಾಲೆಗಳನ್ನು ದತ್ತು ಪಡೆದು ಶೌಚಾಲಯ ನಿರ್ಮಿಸಿ, ಮಕ್ಕಳಿಗೆ ಬುಕ್, ಲೇಖನ ಸಾಮಾಗ್ರಿ ನೀಡಿದೆ ಎಂದರು.

ದೊಡ್ಡಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ 29 ಶಾಲೆಗಳಿಗೆ ಶೌಚಾಲಯ ನಿರ್ಮಿಸಿದೆ. ಸ್ವೇಚ್ಛಾ ಯೋಜನೆಯಲ್ಲಿ ಹಾಡಿಯಲ್ಲಿನ 300 ಮಹಿಳೆಯರಿಗೆ ಸ್ಯಾನಿಟರಿ, ನ್ಯಾಪ್‌ಕಿನ್‌ಗಳನ್ನು ವಿತರಿಸಿ, ಅರಿವು ಮೂಡಿಸಲಾಗಿದೆ. ಪ್ರಸ್ತುತ ವರ್ಷ 6500 ಮಕ್ಕಳಿಗೆ ನೆರವು ನೀಡಲಾಗಿದೆ. ಗೌರಿಬಿದನೂರಲ್ಲಿ 20 ಮಹಿಳೆಯರಿಗೆ ಟೈಲರಿಂಗ್ ತರಬೇತಿ ನೀಡಿ ಗಾರ್ಮೆಂಟ್‌ಗೆ ಕಳಿಸಲಾಗಿದೆ. ಸೇವೆಯ ಸಾಮಾಜಿಕ ಜಾಗೃತಿಗಾಗಿ ಮೈಸೂರಲ್ಲಿ ಸಂಸ್ಥೆಯ ಶಾಖೆಯನ್ನು ಆರಂಭಿಸಲಾಗುವುದು ಎಂದರು.

ಹರಪನಹಳ್ಳಿ ತೆಗ್ಗಿನಮಠ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಎನ್.ಜಿ.ನಾಗನಗೌಡ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ನಜೀರ್, ಕನ್ನಡ ಹೋರಾಟಗಾರ ಹೆಚ್.ಬಿ. ರುದ್ರಗೌಡ ಸಂಸ್ಥೆಯ ನೆರವನ್ನು ಶ್ಲಾಘಿಸಿದರು.

ಎಸ್.ನಿಜಲಿಂಗಪ್ಪ, ಬಸವನಗೌಡ, ಶಿವಣ್ಣ, ಈಶ್ವರಪ್ಪ, ಸದಾಶಿವಪ್ಪ, ಸುನಿಲ್, ಅಶ್ಫಾಕ್, ಶಿಕ್ಷಣ ಸಂಯೋಜಕ ಹರೀಶ್, ಬಸಯ್ಯ ಹಿರೇಮಠ, ಶಿಕ್ಷಕ ಶರಣ್‌ಕುಮಾರ್ ಹೆಗಡೆ, ಡಿ.ಎಂ.ಮಂಜುನಾಥಯ್ಯ ಮತ್ತಿತರರು ಹಾಜರಿದ್ದರು. 34 ಶಾಲೆಗಳ 1300 ಮಕ್ಕಳಿಗೆ ನೋಟ್‌ಪುಸ್ತಕ, ಸಾಮಾಗ್ರಿಗಳನ್ನು ವಿತರಿಸಲಾಯಿತು.

## ಪಾಕ್ : ಇಂಧನ ಏರಿಕೆ

**(1ನೇ ಪುಟದಿಂದ)** ಡೀಸೆಲ್ ಬೆಲೆಯಲ್ಲಿ 59.16 ರೂ.ಗಳ ಏರಿಕೆ ಮಾಡಲಾಗಿದೆ. ಮೇ 25ರ ನಂತರ ಇಂಧನ ಬೆಲೆಯನ್ನು ಶೇ.60ರಷ್ಟು ಹೆಚ್ಚಿಸಲಾಗಿತ್ತು.

ಈಗ ಪಾಕಿಸ್ತಾನದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 233.89 ರೂ. (ಭಾರತದ ರೂಪಾಯಿಯಲ್ಲಿ 87.75 ರೂ.) ಹಾಗೂ ಡೀಸೆಲ್ ಬೆಲೆ 263.31 (ಭಾರತದ ರೂಪಾಯಿಯಲ್ಲಿ 98.62 ರೂ.) ಆಗಿದೆ. ಈ ಬೆಲೆ ಏರಿಕೆಯೊಂದಿಗೆ ಇದುವರೆಗೂ ನೀಡಲಾಗುತ್ತಿದ್ದ ಸಬ್ಸಿಡಿಯನ್ನು ಸಂಪೂರ್ಣ ರದ್ದುಗೊಳಿಸಲಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗುತ್ತಿಲ್ಲ ಎಂದು ಪಾಕ್ ಹಣಕಾಸು ಸಚಿವ ಮಿಫ್ತಾ ಇಸ್ಮಾಯಿಲ್ ತಿಳಿಸಿದ್ದಾರೆ.

ಐ.ಎಂ.ಎಫ್. ಸಾಲ ನೀಡುವ ಸಲುವಾಗಿ ಹಲವಾರು ಸುಧಾರಣಾ ಕ್ರಮಗಳಿಗೆ ಸೂಚಿಸಿತ್ತು. ಅದರಲ್ಲಿ ಪೆಟ್ರೋಲಿಯಂ ಉತ್ಪನ್ನಗಳಿಗೆ ನೀಡಲಾಗುತ್ತಿದ್ದ ಸಬ್ಸಿಡಿ ತೆರವುಗೊಳಿಸುವುದೂ ಸಹ ಸೇರಿತ್ತು.

## ಜನರು 'ಮನೆಗೆ ಚಲೋ' ಮಾಡಲಿದ್ದಾರೆ

**(1ನೇ ಪುಟದಿಂದ)** ಇಲ್ಲ ಎಂದಿದ್ದಾರೆ.

ಜಲ ನಿರ್ವಹಣಾ ಪ್ರಾಧಿಕಾರಕ್ಕೆ ಮೇಕೆದಾಟು ಕುರಿತು ನಿರ್ಧರಿಸುವ ಅಧಿಕಾರವಿದೆ. ಮುಂದಿನ ವಾರ ನಡೆಯುವ ಪ್ರಾಧಿಕಾರದ ಸಭೆಯಲ್ಲಿ ವಿಸ್ತೃತ ಯೋಜನಾ ವರದಿಗೆ ಒಪ್ಪಿಗೆ ಸಿಗುವ ನಿರೀಕ್ಷೆ ಇದೆ ಎಂದರು. ಈ ಸಂದರ್ಭದಲ್ಲಿ ಸಚಿವ ಭೈರತಿ ಬಸವರಾಜ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಮೇಯರ್ ಜಯಮ್ಮ ಗೋಪಿನಾಯ್ಕ, ಮಾಜಿ ಶಾಸಕರಾದ ಬಿ.ಪಿ. ಹರೀಶ್, ಎಂ. ಬಸವರಾಜ ನಾಯ್ಕ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ಮಲೇಬೆನ್ನೂರು : ಮಕ್ಕಳೊಂದಿಗೆ ಪೋಷಕರಿಗೂ ಕೌಶಲ್ಯ ತರಬೇತಿ



ಮಲೇಬೆನ್ನೂರು, ಜೂ. 16- ಪಟ್ಟಣದ ಎಸ್. ಇಂಡಿಯಾ ಪಬ್ಲಿಕ್ ಸ್ಕೂಲ್ ನಲ್ಲಿ ಜಮ್ಮು ಮತ್ತು ಕಾಶ್ಮೀರದಿಂದ ಆಗಮಿಸಿದ್ದ ಸಂಪನ್ಮೂಲ ವ್ಯಕ್ತಿಗಳಿಂದ ಎರಡು ದಿನಗಳ ಕಾಲ ಮಕ್ಕಳ ಕೌಶಲ್ಯ, ಮಾನಸಿಕ ಆರೋಗ್ಯ ಹಾಗೂ ಸಂವಹನ ಸಂಬಂಧಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ವಿವಿಧ ಬ್ಯಾಚ್‌ಗಳಲ್ಲಿ ಪ್ರಾಥಮಿಕ ತರಗತಿಯ ಮಕ್ಕಳಿಗೆ ಕೌಶಲ್ಯ ಆಧಾರಿತ ಶಿಕ್ಷಣ ಯೋಜನೆ ಅಡಿ ಪ್ರಾಯೋಗಿಕ ತರಬೇತಿ ನೀಡಲಾಯಿತು.

ಶಾಲೆಯ ಎಲ್ಲಾ ಪೋಷಕರಿಗಾಗಿ ನಡೆಸಲಾದ ಕಾರ್ಯಾಗಾರದಲ್ಲಿ ಮಕ್ಕಳ ದೇಹ ಮತ್ತು ಮೆದುಳಿನ ರಚನೆ, ಮಾನಸಿಕ ಸಾಮರ್ಥ್ಯ, ಆರೋಗ್ಯ ಸಂರಕ್ಷಣೆ, ಸಮತೋಲಿತ ಆಹಾರ, ಮಕ್ಕಳೊಂದಿಗೆ ವಿವಿಧ ಹಂತಗಳಲ್ಲಿ ಪೋಷಕರು ಬೆರೆಯುವುದು ಮತ್ತು ಅವರ ಬೆಳವಣಿಗೆಗೆ ಸಹಕರಿಸುವುದು ಹೇಗೆ ಎಂಬಿತ್ಯಾದಿ ವಿಧಾನಗಳ ಕುರಿತು ವೈಜ್ಞಾನಿಕ ಆಧಾರ ಸಹಿತ ಮಾಹಿತಿ ನೀಡಲಾಯಿತು.

ಎಸ್ ಇಂಡಿಯಾ ಫೌಂಡೇಶನ್‌ನ ಶೈಕ್ಷಣಿಕ ನಿರ್ದೇಶಕ ಜನಾಬ್ ಫಾಸಲ್, ಜಮ್ಮು ಮತ್ತು ಕಾಶ್ಮೀರದ ರಝಾ ಉಲ್ ಉಲೂಮ್ ಹೈಯರ್ ಸೆಕೆಂಡರಿ ಶಾಲೆಯ ಪ್ರಾಂಶುಪಾಲ ಜನಾಬ್ ಲುಬೈಬ್ ಅದಾನಿ, ಎಸ್ ಇಂಡಿಯಾ ಫೌಂಡೇಶನ್ ನ ಜಮ್ಮು ಮತ್ತು ಕಾಶ್ಮೀರದಲ್ಲಿರುವ ಇಸಿ ವಿಭಾಗದ ನಿರ್ವಾಹಕರಾದ ಜನಾಬ್ ಜಾಫರ್, ಕಾರ್ಯನಿರ್ವಾಹಕ ತರಬೇತುದಾರ ಜನಾಬ್ ಫಿರೋಜ್ ಅಲಿ ಅವರು ತರಬೇತಿ ನೀಡಿದರು.

## ಪಾಂಡೋಮಟ್ಟಿ ಶಾಲೆಗೆ ತಟ್ಟೆ, ಲೋಟ ಕೊಡುಗೆ ನೀಡಿದ ಸಾಹಿತಿ ಸರೋಜ



ಚನ್ನಗಿರಿ, ಜೂ.16- ತಾಲ್ಲೂಕಿನ ಪಾಂಡೋಮಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹಿರಿಯ ಸಾಹಿತಿ ಶ್ರೀಮತಿ ಕೆ.ಜಿ. ಸರೋಜ ನಾಗರಾಜ್ ಹಾಗೂ ಎಂ.ಎನ್. ವರುಣ್ ಅವರು ಬಿಸಿಯೂಟಕ್ಕಾಗಿ ವಿದ್ಯಾರ್ಥಿಗಳಿಗೆ ತಟ್ಟೆ ಹಾಗೂ ಲೋಟಗಳನ್ನು ಕೊಡುಗೆಯಾಗಿ ನೀಡಿದರು. ಶಾಲೆಯ ಮುಖ್ಯೋಪಾಧ್ಯಾಯ ಬಿ.ಎಂ. ಜಯಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ವಿಶ್ವ ಪಂಜ ಕುಸ್ತಿ ಸ್ಪರ್ಧೆಗೆ ಅಕ್ರಂ ಬಾಷ ಆಯ್ಕೆ



ದಾವಣಗೆರೆ, ಜೂ. 16- ಆಂಧ್ರಪ್ರದೇಶದ ಹೈದ್ರಾಬಾದ್‌ನ ಗಚ್ಚಿ ಬೌಲಿ ಇಂಡೋರ್ ಸ್ಟೇಡಿಯಂನಲ್ಲಿ ಕಳೆದ ವಾರ ನಡೆದ ಪಂಜ ಕುಸ್ತಿ ಸ್ಪರ್ಧೆಯಲ್ಲಿ ದಾವಣಗೆರೆಯ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಎಆರ್‌ಎಸ್‌ಐ ಹಾಗೂ ಶ್ರೀ ಬೀರೇಶ್ವರ ವ್ಯಾಯಾಮ ಶಾಲೆಯ ಕ್ರೀಡಾಪಟು ಅಕ್ರಂ ಬಾಷ ಅವರು ಈ ಸ್ಪರ್ಧೆಯಲ್ಲಿ ಭಾಗವಹಿಸಿ ಮಾಸ್ಟರ್ ಕ್ಲಾಸ್ 90 ಕೆಜಿ ವಿಭಾಗದಲ್ಲಿ ಬೆಳ್ಳಿಯ ಪದಕ ಪಡೆಯುವುದರೊಂದಿಗೆ ಟರ್ಕಿ ದೇಶದಲ್ಲಿ ನಡೆಯಲಿರುವ ವಿಶ್ವ ಪಂಜ ಕುಸ್ತಿ ಸ್ಪರ್ಧೆಗಳಿಗೆ ಆಯ್ಕೆಯಾಗಿದ್ದಾರೆ. ವಿಜೇತ ಕ್ರೀಡಾಪಟುವಿಗೆ ಎಸ್ಪಿ ಸಿ.ಬಿ. ರಿಷ್ಯಂತ್, ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಪೊಲೀಸ್ ಉಪಾಧೀಕ್ಷಕ ಪಿ.ಬಿ ಪ್ರಕಾಶ್, ಆರ್‌ಪಿಐ ಎಸ್.ಎನ್. ಕಿರಣ್ ಕುಮಾರ್ ಮತ್ತು ಇತರರು ಅಭಿನಂದಿಸಿದ್ದಾರೆ.


**ಪಿ. ಹನುಮಂತರಾವ್ ಸುರ್ವೆ ನಿಧನ**



ದಾವಣಗೆರೆ ವಿನೋಬನಗರ 1ನೇ ಮೇನ್, 2ನೇ ಕ್ರಾಸ್ ವಾಸಿ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಮಾಜಿ ಸಹ ಕಾರ್ಯದರ್ಶಿಗಳಾದ

**ಪಿ. ಹನುಮಂತರಾವ್ ಸುರ್ವೆ**

ಇವರು ದಿನಾಂಕ 16.06.2022ರ ಗುರುವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 95 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 17.06.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ**

**ಮೊ: 98805 50517**



॥ ಶ್ರೀ ಅಬಲೂರು ಬಸವೇಶ್ವರ ಪ್ರಸನ್ನ ॥ ॥ ಶ್ರೀ ಚೌಕಿ ಚನ್ನಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಅರಿಶಿಣಗೆರೆ ಗ್ರಾಮದ ವಾಸಿ

ಶ್ರೀಮತಿ ನಾಗರತ್ನಮ್ಮ ಶ್ರೀ ನೀಲಕಂಠಪ್ಪ ಮತ್ತು ಸಹೋದರರು

ಇವರು ಮಾಡುವ ವಿಜ್ಞಾಪನೆಗಳು.

ದಿ. : 14.06.2022ರ ಮಂಗಳವಾರ ಸಂಜೆ 7ಕ್ಕೆ

ಶ್ರೀಮತಿ ದಿ॥ ಗೌರಮ್ಮ ಶ್ರೀ ದಿ॥ ಲಿಂಗಪ್ಪಗೌಡ್ರು

ಇವರ ಮಗನಾದ

**ಶ್ರೀಯುತ ಹೆಚ್.ಜಿ. ಪಾಲಾಕ್ಷಪ್ಪ**

(ನಿವೃತ್ತ ನೌಕರರು, ಬಾಪೂಜಿ ಕೋ-ಆಪ್ ಬ್ಯಾಂಕ್)

ಇವರು ಶಿವಾಧೀನರಾದ ಪ್ರಯುಕ್ತ, ಮೃತರ ಆತ್ಮಶಾಂತಿಗಾಗಿ

"ಕೈಲಾಸ ಶಿವಗಣಾರಾಧನೆ"ಯನ್ನು

ದಿನಾಂಕ : 18.06.2022ನೇ ಶನಿವಾರ ಬೆಳಿಗ್ಗ 10.30 ಕ್ಕೆ ಅರಿಶಿಣಗೆರೆ ಗ್ರಾಮದ ನಮ್ಮ ಸ್ವಗೃಹದಲ್ಲಿ ಹಮ್ಮಿಕೊಂಡಿದ್ದೇವೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.


ಇಂತಿ ದುಃಖ ತಪ್ತರು :

ಶ್ರೀಮತಿ ಸುಮಾ ಮತ್ತು ಮಕ್ಕಳು, ಹಳೇಗೌಡ್ರು ವಂಶಸ್ಥರು

ಊರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು

ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


**ತಣಿಗೆರೆ ಹೆಚ್.ಡಿ. ಕೆಂಚಯಲ್ಲಪ್ಪ**



ಚನ್ನಗಿರಿ ತಾಲ್ಲೂಕು ತಣಿಗೆರೆ ಗ್ರಾಮದ ಮುಖಂಡ ಹೆಚ್.ಡಿ. ಕೆಂಚಯಲ್ಲಪ್ಪ (92 ವರ್ಷ) ಇವರು ದಿನಾಂಕ: 16.06.2022 ಗುರುವಾರ ಸಂಜೆ ನಿಧನರಾದರು. ತಣಿಗೆರೆ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಟಿ. ರುದ್ರಪ್ಪ ಸೇರಿ ನಾಲ್ವರು ಪುತ್ರರನ್ನು, ಮೂವರು ಪುತ್ರಿಯರು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 17.06.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ತಣಿಗೆರೆ ಗ್ರಾಮದ ಅವರ ತೋಟದಲ್ಲಿ ನೆರವೇರಲಿದೆ.


**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು


## ಮಹಾನಗರ ಪಾಲಿಕೆಯಿಂದ ಸಿಲಿಂಡರ್ ವಿತರಣೆ



ದಾವಣಗೆರೆ, ಜೂ.16- ಮಹಾನಗರ ಪಾಲಿಕೆಯ ಉಪಮಹಾಪೌರರಾದ ಶ್ರೀಮತಿ ಗಾಯತ್ರಿ ಬಾಯಿ ಖಂಡೋಜಿರಾವ್ ಅವರ ಅಧ್ಯಕ್ಷತೆಯಲ್ಲಿ ಉಜ್ವಲ್ ಯೋಜನೆಯಡಿಯಲ್ಲಿ ಸಿಲೆಂಡರ್, ಒಲೆ, ರೆಗ್ಯುಲೇಟರ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು.

ಪ್ರಧಾನ ಮಂತ್ರಿ ನರೇಂದ್ರ ಮೋದಿಜಿ ಅವರ ಎಂಟು ವರ್ಷದ ಯಶಸ್ವಿ ಯೋಜನೆಗಳ ಕರಪತ್ರವನ್ನು ಹಂಚಲಾಯಿತು. ಈ ಸಂದರ್ಭದಲ್ಲಿ ಸಂತೋಷ್ ಕುಮಾರ್ ಜಾದವ್ (ಕೋಟಿ), ಶಿವಾನಂದ ವೈ., ಬಾಲರಾಜ್, ರಾಕೇಶ್, ಪವನ್, ವಿನಯ್, ಹನುಮಂತ, ಪರಶುರಾಮ್ ಹಾಗೂ ವಾರ್ಡಿನ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು.

## ಅಗ್ನಿಪಥದ ವಿರುದ್ಧ ಹಿಂಸಾತ್ಮಕ ಪ್ರತಿಭಟನೆ

**(1ನೇ ಪುಟದಿಂದ)** ಬಿಜೆಪಿ ಶಾಸಕ ಅರುಣಾ ದೇವಿ ಅವರ ಕಾರಿನ ಮೇಲೆ ಕಲ್ಲು ತೂರಿ ಹಲ್ಲೆ ನಡೆಸಲಾಗಿದೆ. ಶಾಸಕಿ ಸೇರಿದಂತೆ ಐವರು ಗಾಯಗೊಂಡಿದ್ದಾರೆ. ಭಭುವಾ ಹಾಗೂ ಛಾಪ್ರಾ ನಿಲ್ದಾಣಗಳಲ್ಲಿ ನಿಲ್ಲಿಸಲಾಗಿದ್ದ ರೈಲ್ವೆ ಬೋಗಿಗಳಿಗೆ ಬೆಂಕಿ ಹಚ್ಚಲಾಗಿದೆ. ಹಲವು ಬೋಗಿಗಳ ಗಾಜುಗಳನ್ನು ಒಡೆಯಲಾಗಿದೆ. ಆರಾ ರೈಲ್ವೆ ನಿಲ್ದಾಣಕ್ಕೆ ಮುತ್ತಿಗೆ ಹಾಕಿದ್ದ ಪ್ರತಿಭಟನಾಕಾರರನ್ನು ಪೊಲೀಸರು ಚೆದುರಿಸಿದ್ದಾರೆ. ಜೆಹಾನಾಬಾದ್, ಬಕ್ಸಾರ್, ಕಾತಿಹಾರ್, ಸರನ್, ಭೋಜಪುರ, ಕೈಮುರ್, ಹಾಜಿಪುರ್ ಹಾಗೂ ಬಕ್ಸಾರ್ ಸೇರಿದಂತೆ ಹಲವೆಡೆ ರೈಲುಗಳ ಸಂಚಾರಕ್ಕೆ ಅಡ್ಡಿಪಡಿಸಲಾಗಿದೆ. ಕಲ್ಲು ತೂರಾಟದಲ್ಲಿ ಹಲವಾರು ಜನರಿಗೆ ಗಾಯಗಳಾಗಿವೆ.

# ಮಕ್ಕಳಿಗೆ ಪೂರಕ ಆಹಾರ ಸರಿಯಾಗಿ ನೀಡಿದಲ್ಲಿ ಆರೋಗ್ಯ

**ಮಕ್ಕಳ ವೈದ್ಯ ಡಾ. ಎಸ್. ಮೃತ್ಯುಂಜಯ**

ದಾವಣಗೆರೆ, ಜೂ. 16 – ಮಕ್ಕಳಿಗೆ 6 ತಿಂಗಳಾದ ನಂತರ ಎದೆಹಾಲಿನ ಜೊತೆಗೆ ಪೂರಕ ಆಹಾರವನ್ನು ಸಮರ್ಪಕವಾಗಿ ಹಾಗೂ ಸರಿಯಾದ ರೀತಿಯಲ್ಲಿ ನೀಡಿದಲ್ಲಿ ಆರೋಗ್ಯಕರ ಬೆಳವಣಿಗೆ ಸಾಧ್ಯ ಎಂದು ಜೆ.ಜೆ.ಎಂ.ಸಿ. ಮಕ್ಕಳ ವೈದ್ಯ ಡಾ. ಎಸ್. ಮೃತ್ಯುಂಜಯ ತಿಳಿಸಿದ್ದಾರೆ.

ನಗರದ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಪೂರಕ ಆಹಾರ ಜಾಗೃತ ದಿನಾಚರಣೆ' ಹಿನ್ನೆಲೆಯಲ್ಲಿ ಪೂರಕ ಆಹಾರದ ಮಹತ್ವದ ಕುರಿತು ಅವರು ಮಾತನಾಡುತ್ತಿದ್ದರು.

ಆರು ತಿಂಗಳವರೆಗೆ ಮಕ್ಕಳಿಗೆ ತಾಯಿ ಎದೆಹಾಲನ್ನು ಮಾತ್ರ ಕೊಡಬೇಕು. ನಂತರದಲ್ಲಿ ಎರಡು ವರ್ಷಗಳವರೆಗೆ ಮೊದಲು ಎದೆಹಾಲು ಉಣಿಸಿದ ನಂತರ, ಪೂರಕ ಆಹಾರ ಕೊಡಬೇಕು ಎಂದವರು ಹೇಳಿದರು.

ಎದೆಹಾಲು ಮಕ್ಕಳಿಗೆ ಶ್ರೇಷ್ಠವಾಗಿದ್ದು, ಅದಕ್ಕೆ ಎಲ್ಲಕ್ಕಿಂತ ಹೆಚ್ಚು ಆದ್ಯತೆ ನೀಡಬೇಕು. ನಂತರವೇ ಪೂರಕ ಆಹಾರ ನೀಡಬೇಕು ಎಂದ ಅವರು, ಮಕ್ಕಳಿಗೆ ಮನೆಯಲ್ಲಿ ಮಾಡಿದ ಆಹಾರವನ್ನು ಕೊಡಬೇಕು. ಹೋಟೆಲ್ ಇಲ್ಲವೇ ಸಿದ್ಧ ತಿನಿಸು ಇಲ್ಲವೇ ಡಬ್ಬಿಯ ಪೌಡರ್ ಆಹಾರ ಕೊಡಲೇಬಾರದು ಎಂದು ಹೇಳಿದರು.

**ಚಮಚ ಪರೀಕ್ಷೆ** : ಪೂರಕ ಆಹಾರ ಮೆತ್ತಗಿರಬೇಕು. ಆದರೆ, ನೀರಾಗಿರಬಾರದು. ಚಮಚದಲ್ಲಿ ಪೂರಕ ಆಹಾರ ಹಿಡಿದು ಅಡ್ಡವಾಗಿ ಹಿಡಿದಾಗ ಬೀಳಬಾರದು. ಆ ರೀತಿಯಲ್ಲಿ ಆಹಾರ ಸಿದ್ಧಪಡಿಸಬೇಕು ಎಂದು ಡಾ. ಮೃತ್ಯುಂಜಯ ಹೇಳಿದರು.

**ಆರಂಭದಲ್ಲಿ ಸ್ವಲ್ಪ** : ಆರು ತಿಂಗಳಾದ ನಂತರ ಒಂದು ಚಮಚದಷ್ಟು ಪ್ರಮಾಣದಲ್ಲಿ ಪೂರಕ ಆಹಾರ ನೀಡಬೇಕು. ನಂತರ ಸ್ವಲ್ಪ ಸ್ವಲ್ಪವೇ ಹೆಚ್ಚಿಸಬೇಕು. ಎರಡು ತಿಂಗಳ ನಂತರದಲ್ಲಿ ಮಕ್ಕಳಿಗೆ 4-6 ಬಾರಿ ಪೂರಕ ಆಹಾರ ನೀಡಬಹುದು ಎಂದವರು ಹೇಳಿದರು.

**ಸಕಲ ಆಹಾರ** : ಮಕ್ಕಳಿಗೆ ಎಲ್ಲ ರೀತಿಯ ಧಾನ್ಯ ಹಾಗೂ ಕಾಳುಗಳಿಂದ ಮಾಡಿದ ಗಂಜಿ ತಿನ್ನಿಸಬೇಕು. ಹಣ್ಣು ಹಾಗೂ ತರಕಾರಿಗಳನ್ನು ನೀಡಬೇಕು. ಗಂಜಿಯ ಜೊತೆಗೆ ಎರಡು ಹನಿ ಜೇನು ತುಪ್ಪ ಬೆರೆಸುವುದು ಉತ್ತಮ.

**ಬೇಯಿಸಿ ಕೊಡಿ** : ಮಕ್ಕಳಿಗೆ ಹಸಿ ತರಕಾರಿಗಳನ್ನು ನೀಡಬಾರದು. ತರಕಾರಿಗಳನ್ನು ಬೇಯಿಸಿ ಕೊಡಬೇಕು. ತರಕಾರಿಯಿಂದ ಕಬ್ಬಿಣ, ವಿಟಮಿನ್, ಜಿಂಕ್ ಮೊದಲಾದ ಅಂಶಗಳು ಸಿಗುತ್ತವೆ. ಮಾಗಿದ ಹಣ್ಣು, ಬಾಳೆ, ಮಾವು, ಪಪ್ಪಾಯಿ, ಸಪೋಟ ಬೇಯಿಸಿ ಕೊಡಬಹುದು. ಪ್ರತಿ ವಾರವೂ ಮಕ್ಕಳಿಗೆ ಹೊಸ ಹೊಸ ಆಹಾರ ಪರಿಚಯಿಸುವುದು ಉತ್ತಮ ಎಂದವರು ಹೇಳಿದರು.

**ನಿರ್ಲಕ್ಷ್ಯದಿಂದ ಅಪೌಷ್ಟಿಕತೆ** : ಪೂರಕ ಆಹಾರ ನೀಡುವುದು ತಡ ಮಾಡಿದರೆ ಅಪೌಷ್ಟಿಕತೆಗೆ ಸಿಲುಕುವ ಸಾಧ್ಯತೆ ಇರುತ್ತದೆ. ಆರು ತಿಂಗಳ ನಂತರ ಮಕ್ಕಳಿಗೆ ಎದೆಹಾಲಿಗಿಂತಲೂ ಹೆಚ್ಚಿನ ಪೌಷ್ಟಿಕಾಂಶದ ಅಗತ್ಯತೆ ಬರುತ್ತದೆ. ಆರಂಭದಲ್ಲಿ ಪೂರಕ ಆಹಾರದಿಂದ ಮಕ್ಕಳಲ್ಲಿ ಭೇದಿ ಕಂಡು ಬರಬಹುದು. ಬಹಳಷ್ಟು ಬಾರಿ ಇದಕ್ಕೆ ಅನೈರ್ಮಲ್ಯವೇ ಕಾರಣವಾಗಿರುತ್ತದೆ ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಕ್ಕಳ ವೈದ್ಯರಾದ ಡಾ. ಬಾಣಾಪುರಮಠ, ಡಾ. ಎಂ.ಬಿ. ಕೌಜಲಗಿ, ನರ್ಸಿಂಗ್ ಸೂಪರಿಂಟೆಂಡೆಂಟ್ ಗೌರಮ್ಮ ಮಾಕರಿ, ಸಿಸ್ಟರ್‌ಗಳಾದ ಪಿ.ಮಂಜುಳ, ಬಿ. ಆರ್. ಶೈಲಜ ಮತ್ತಿತರರು ಉಪಸ್ಥಿತರಿದ್ದರು.

### ಹುಳವೂ ತಿನ್ನದ ಡಬ್ಬಿಯ ಪೌಡರ್ ಮಕ್ಕಳಿಗೇಕೆ?

ಕಂಪನಿಗಳಲ್ಲಿ ತಯಾರಿಸಲಾದ ಡಬ್ಬಿಯ ಪೌಡರ್ ಆಹಾರದಲ್ಲಿ ರಾಸಾಯನಿಕಗಳು, ಪ್ರಿಸರ್ವೇಟಿವ್ ಬೆರೆಸಲಾಗಿರುತ್ತದೆ. ಇವುಗಳು ದುಬಾರಿ ಹಾಗೂ ಮಕ್ಕಳ ಆರೋಗ್ಯಕ್ಕೂ ಒಳ್ಳೆಯವಲ್ಲ. ಎರಡು ವರ್ಷಗಳವರೆಗೆ ಮಕ್ಕಳಿಗೆ ಮನೆಯಲ್ಲಿ ಮಾಡಿದ ತಾಜಾ ಆಹಾರವನ್ನೇ ನೀಡಬೇಕು ಎಂದು ಹಿರಿಯ ಮಕ್ಕಳ ವೈದ್ಯ ಡಾ. ಬಾಣಾಪುರಮಠ ತಿಳಿಸಿದ್ದಾರೆ.

ಅಕ್ಕಿ ಹಿಟ್ಟು ಹಾಗೂ ಕಂಪನಿಗಳ ಡಬ್ಬಿಯ ಪೌಡರ್ ಆಹಾರ ಎರಡನ್ನೂ ತೆರೆದಿಟ್ಟರೆ ಹುಳಗಳು ಅಕ್ಕಿ ಹಿಟ್ಟಿಗೆ ಹತ್ತುತ್ತವೆಯೇ ಹೊರತು ಡಬ್ಬಿಯ ಪೌಡರ್‌ಗಲ್ಲ. ಹುಳ ಸಹ ಮುಟ್ಟದ ಆಹಾರ ಮಕ್ಕಳಿಗೇಕೆ ಕೊಡಬೇಕು? ಎಂದು ದಿ. ಡಾ. ನಿರ್ಮಲಾ ಕೇಸರಿ ಅವರು ಪ್ರಶ್ನಿಸುತ್ತಿದ್ದರು ಎಂದು ಡಾ. ಬಾಣಾಪುರಮಠ ನೆನಪಿಸಿದರು.

ಅಲ್ಲದೇ ಡಬ್ಬಿಯ ಪೌಡರ್ ಆಹಾರದಿಂದ ಮಕ್ಕಳಲ್ಲಿ ಅಟೆನ್ಷನ್ ಡೆಫಿಸಿಟ್ ಹೈಪರ್ ಆಕ್ಟಿವ್ ಅಪಾಯ ಹೆಚ್ಚಾಗಬಹುದು. ಹೀಗಾಗಿ ಮಕ್ಕಳಿಗೆ ಮನೆಯಲ್ಲಿ ಮಾಡಿದ ಆಹಾರವೇ ಶ್ರೇಷ್ಠ ಎಂದರು.

### ಪೂರಕ ಆಹಾರಕ್ಕೆ ಪಾಲಿಸುವುದು :

ಮನೆಯಲ್ಲಿಯೇ ಮೆತ್ತನೆ ಆಹಾರ ತಯಾರಿಕೆ
ಮೃದು ಆಹಾರ ಪ್ರಮಾಣ ವಯಸ್ಸಿಗೆ ತಕ್ಕಂತೆ ಹೆಚ್ಚಳ
9 ತಿಂಗಳು ತುಂಬಿದ ಮಗು ತಾನೇ ತಿನ್ನಲು ಪ್ರೋತ್ಸಾಹ
ವರ್ಷ ತುಂಬಿದ ನಂತರ ಮನೆಯ ಊಟ ಎಲ್ಲರೊಂದಿಗೆ ಬೆರೆತು ಸೇವನೆ
ಊಟಕ್ಕೆ ಅತಿ ಒತ್ತಾಯ ಬೇಡ, ಪ್ರೋತ್ಸಾಹ ಇರಲಿ
ಎರಡು ವರ್ಷದವರೆಗೆ ಎದೆ ಹಾಲನ್ನು ಹೆಚ್ಚಾಗಿ ಕುಡಿಸಬೇಕು

### ಇದನ್ನು ಮಾಡಬೇಡಿ

ಬಾಟಲಿ ಹಾಲು, ಡಬ್ಬಿಯ ಪೌಡರ್ ಆಹಾರ ಬೇಡ
ಇಡೀ ಬೀಜ – ಕಾಳು ಬೇಡ
ಸಕ್ಕರೆ, ಬೆಲ್ಲ, ಉಪ್ಪು ಮಗುವಿನ ಆಹಾರದಲ್ಲಿ ಬೆರೆಸಬಾರದು
ಊಟದ ಸಮಯದಲ್ಲಿ ಮೊಬೈಲ್ - ಟಿವಿ ಇರಬಾರದು
ಅಂಗಡಿ ತಿಂಡಿಗಳು, ಚಹಾ - ಕಾಫಿ, ಬಿಸ್ಕೆಟ್, ಚಾಕೊಲೇಟ್, ತಂಪು ಪಾನೀಯ ಇತ್ಯಾದಿ ಕೊಡಬಾರದು

# ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತಿರುವ ಕೇಂದ್ರ - ರಾಜ್ಯ ಬಿಜೆಪಿ ಸರ್ಕಾರಗಳು



**ಹರಪನಹಳ್ಳಿ**

ಹರಪನಹಳ್ಳಿ, ಜೂ. 16- ರೈತರು ಸಂಕಷ್ಟದಲ್ಲಿ ಇದ್ದಾಗಲೆಲ್ಲಾ ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳು ಸ್ಪಂದಿಸುತ್ತಿವೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ತಿಳಿಸಿದ್ದಾರೆ.

ಅವರು ಪಟ್ಟಣದ ತಾ.ಪಂ. ಆವರಣದಲ್ಲಿರುವ ಸಾಮರ್ಥ್ಯ ಸೌಧದಲ್ಲಿ ತೋಟಗಾರಿಕೆ ಇಲಾಖೆ ಮತ್ತು ಜಿ.ಪಂ. ಸಹಯೋಗದಲ್ಲಿ ಮೆಣಸಿನ ಕಾಯಿ ಮತ್ತು ಈರುಳ್ಳಿ ಬೆಳೆಗಳ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ದೇಶಕ್ಕೆ ರೈತರು ಅನ್ನದಾತ, ಬೆನ್ನೆಲುಬು ಎನ್ನುತ್ತಾರೆ, ಅಂತಹ ರೈತರು ಈಚೆಗೆ ಅತಿವೃಷ್ಟಿಯಿಂದ ಬೆಳೆ ಹಾನಿ ಸಂಭವಿಸಿ ತೀವ್ರ ನಷ್ಟ ಅನುಭವಿಸಿದ್ದಾರೆ, ಆದ್ದರಿಂದ ಕೇಂದ್ರ ಸರ್ಕಾರ ವರ್ಷಕ್ಕೆ 6 ಸಾವಿರ ರೂ. ಸಹಾಯ ಧನ ಹಾಗೂ ರಾಜ್ಯ ಸರ್ಕಾರ 4 ಸಾವಿರ ಹೀಗೆ ಒಟ್ಟು 10 ಸಾವಿರ ಸಹಾಯ ಧನ ರೈತರ ಖಾತೆಗೆ ವರ್ಷಕ್ಕೊಮ್ಮೆ ಜಮಾ ಆಗುತ್ತದೆ ಎಂದು ಅವರು ಹೇಳಿದರು.

ಸರ್ಕಾರ ನೀಡುವ ಬೀಜ, ಇತರೆ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಿ ಎಂದ ಅವರು, ರೈತರಿಗೆ ವೈಜ್ಞಾನಿಕ ತಿಳಿವಳಿಕೆ ನೀಡಬೇಕು ಎಂದು ವಿಚಾರ ಸಂಕಿರಣ ಆಯೋಜಿಸಲಾಗಿದೆ.

ಈ ಸಂದರ್ಭದಲ್ಲಿ ಫಲಾನುಭವಿ ರೈತರಿಗೆ ವಿವಿಧ ತರಕಾರಿ ಬೀಜಗಳ ಪಾಕೆಟ್ ವಿತರಿಸಿದರು.

ಇಲ್ಲಿಯ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಜಯಸಿಂಹ ಮಾತನಾಡಿ, ಅತಿವೃಷ್ಟಿಯಿಂದ ಈಚೆಗೆ ಮೆಣಸಿನಕಾಯಿ ಹಾಗೂ ಈರುಳ್ಳಿ ಬೆಳೆಗೆ ಸಾಕಷ್ಟು ಹಾನಿಯಾಗಿ ರೈತರಿಗೆ ಸಾಕಷ್ಟು ನಷ್ಟ ಸಂಭವಿಸಿದೆ, ಆದ್ದರಿಂದ ರೈತರಿಗೆ ಕೃಷಿ ತಜ್ಞರಿಂದ ತಿಳಿವಳಿಕೆ ಮೂಡಿಸಲು ಈ ವಿಚಾರ ಸಂಕಿರಣ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

ಕೃಷಿ ತಜ್ಞರಾದ ಹನುಮಂತಪ್ಪ ಶ್ರೀಹರಿ, ರಾಘವೇಂದ್ರ ಆಚಾರ್ಯ, ತಾ.ಪಂ. ಇಒ ಪ್ರಕಾಶ್, ಬಿಜೆಪಿ ಮುಖಂಡರಾದ ಲೋಕೇಶ್, ಮಲ್ಲೇಶ್, ಕಣವಿಹಳ್ಳಿ ಮಂಜುನಾಥ್ ಹಾಗು ಇತರರು ಹಾಜರಿದ್ದರು.

## ರೆಡ್ ಕ್ರಾಸ್ ಸಂಸ್ಥೆಯಿಂದ ಸಿ.ವಿ. ರಾಮನ್ ಕಾಲೇಜಿನಲ್ಲಿ ರಕ್ತದಾನ ಶಿಬಿರ



ದಾವಣಗೆರೆ, ಜೂ.16- ನಗರದ ಡಾ. ಸಿ.ವಿ. ರಾಮನ್ ಕಾಲೇಜು ಹಾಗೂ ರೆಡ್ ಕ್ರಾಸ್ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ವಿಶ್ವ ರಕ್ತದಾನ ದಿನದ ಕಾರ್ಯಕ್ರಮವನ್ನು ನಗರದ ವೈದ್ಯ ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷ ಡಾ. ಎ.ಎಂ. ಶಿವಕುಮಾರ್ ಅವರು ರಕ್ತ ದಾನಿಗಳಿಗೆ ಪ್ರಶಸ್ತಿ ಪತ್ರ ನೀಡುವುದರ ಮೂಲಕ ಉದ್ಘಾಟಿಸಿದರು. ಡಾ. ಬಸವರಾಜು, ಕಾಲೇಜಿನ ಪ್ರಾಚಾರ್ಯ ಪ್ರಶಾಂತ್, ಎನ್.ಸಿ. ಸಂಸ್ಥೆಯ ಆಡಳಿತಾಧಿಕಾರಿ ಡಾ. ಶಿವಯ್ಯ ಎಸ್. ರಾಷ್ಟ್ರೀಯ ಸೇವಾ ಯೋಜನಾ ಅಧಿಕಾರಿ ಅರುಣ್ ಕುಮಾರ್ ಎಸ್.ಎಸ್. ಮತ್ತು ರೆಡ್ ಕ್ರಾಸ್ ಸಂಸ್ಥೆಯ ಸಂಯೋಜಕ ಕೊಟ್ರೇಶ್, ನಿರ್ದೇಶಕರುಗಳಾದ ಮಹಮ್ಮದ್ ಹಿನಾಯತ್ತುಲ್ಲಾ, ಶ್ರೀಕಾಂತ್ ಬಂಗೇರಾ ಮತ್ತು ಇತರರು ಉಪಸ್ಥಿತರಿದ್ದರು.

## ಜಯದೇವ ಪ್ರಸಾದ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ. 15- ವೀರಶೈವ ವಿದ್ಯಾವರ್ಧಕ ಫಂಡ್ ಸಂಘದ ಶ್ರೀ ಜಗದ್ಗುರು ಜಯದೇವ ಪ್ರಸಾದ ನಿಲಯಕ್ಕೆ 2022-23 ನೇ ಸಾಲಿಗೆ ವೀರಶೈವ ವಿದ್ಯಾರ್ಥಿಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಜೂ. 25 ರಿಂದ ಅರ್ಜಿಗಳನ್ನು ವಿತರಿಸಲಾಗುವುದು. ಪ್ರಥಮ, ದ್ವಿತೀಯ ಪಿಯುಸಿ, ಎಲ್ಲಾ ಪದವಿ ಕೋರ್ಸ್ ಹಾಗೂ ಉನ್ನತ ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಅವಶ್ಯವಿರುವ ಅರ್ಹ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಂಘದ ಕಾರ್ಯದರ್ಶಿ ತಿಳಿಸಿದ್ದಾರೆ.

# ಪವಾಡ ಪುರುಷ ಗುರುಕೆಂಪೇಶ್ವರ ಸ್ವಾಮಿಯ ರಥೋತ್ಸವ



**ಹರಪನಹಳ್ಳಿ**

ಹರಪನಹಳ್ಳಿ, ಜೂ.16- ಇತಿಹಾಸ ಪ್ರಸಿದ್ದ ಪಂಚಗಣಾದೀಶರಲ್ಲಿ ಒಬ್ಬರಾಗಿ ಪಟ್ಟಣದಲ್ಲಿ ನೆಲೆಸಿರುವ ಪವಾಡ ಪುರುಷ ಗುರುಕೆಂಪೇಶ್ವರ ಸ್ವಾಮಿಯ ರಥೋತ್ಸವವು ಮಂಗಳವಾರ ಸಂಜೆ ವೈಭವದಿಂದ ಜರುಗಿತು.

ಇಲ್ಲಿನ ಮೇಗಳಪೇಟೆಯ ಕೆಂಪೇಶ್ವರ ಮಠದ ಬಳಿ ಪೂಜೆ ನೆರವೇರಿಸಿ ಸಮಾಳ, ನಂದಿಕೋಲು ವಾದ್ಯಗಳೊಂದಿಗೆ ರಥೋತ್ಸವದ ಬಳಿ ಬಂದು ರಥದ ಗಾಲಿಗೆ ಪೂಜೆ ನೇರವೇರಿಸಿ ನಂತರ ಧ್ವಜವನ್ನು ಹರಾಜು ಮಾಡಲಾಯಿತು.

ಪೂಜೆಯ ಬಳಿಕ ಸಂಜೆ 7 ಗಂಟೆಗೆ ಅಪಾರ ಭಕ್ತ ವೃಂದ ಅತ್ಯಂತ ಸಡಗರದಿಂದ ರಥವನ್ನು ಎಳೆಯುವ ಮೂಲಕ ಕೆಂಪೇಶ್ವರ ಸ್ವಾಮಿಗೆ ಭಕ್ತಿ ಸಮರ್ಪಿಸಿದರು. ಕೆಂಪೇಶ್ವರರ ದೇವಸ್ಥಾನದಲ್ಲಿ ಮೂರ್ತಿಗೆ ಹೂವಿನ ಅಲಂಕಾರಗಳಿಂದ ವಿಶೇಷ ಪೂಜೆ ಮಾಡಲಾಗಿತ್ತು. ರಥದಲ್ಲಿ ಜಿ.ಎಂ.ವಾಗೀಶ ಸ್ವಾಮಿಗಳು ಆಸೀನರಾಗಿದ್ದರು. ರಥೋತ್ಸವ ಕಾರ್ಯಕ್ರಮದಲ್ಲಿ ಅರ್ಚಕ ಕೆ.ಎಂ.ಶಿವಯೋಗಿ, ಕೆಂಪೇಶ್ವರ ದೇವಸ್ಥಾನ ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ಎಂ.ರಾಜಶೇಖರ್, ಕಾರ್ಯದರ್ಶಿ ಪಟೇಲ್ ಬೆಟ್ಟನಗೌಡ, ಖಜಾಂಚಿ ಹುಳ್ಳಿ ಕೊಟ್ರಪ್ಪ, ಪಿ.ಬಿ.ಗೌಡ, ಮುಖ್ಯ ಶಿಕ್ಷಕ ಎ. ಎಸ್.ಎಂ. ಗುರುಪ್ರಸಾದ್, ಶಿವರಾಜ ಸಾವಳಗಿ, ಪ್ರಕಾಶ್ ಸಾವಳಗಿ, ಪಿ.ಬಸವರಾಜ್, ಎಲ್ . ಕೊಟ್ರೇಶ್, ಕೊಟ್ಗಿ ವಿಶ್ವನಾಥ್, ಕೊಟ್ಗಿ ಕರಿಬಸಪ್ಪ, ಎಂ.ಬಿ.ಪಾಟೀಲ್, ಚೆನ್ನನಗೌಡ, ಓಂಕಾರಗೌಡ, ಕೌಟಿ ವಾಗೀಶ್, ಮಟ್ಟಿ ಮಂಜುನಾಥ್, ಸಿ.ಎಂ.ಕೊಟ್ರಯ್ಯ, ಲಿಂಗದಹಳ್ಳಿ ಬಸವರಾಜ್, ಪಿ.ಬಸವರಾಜ್, ಮತ್ತಿತರರು ಪಾಲ್ಗೊಂಡಿದ್ದರು.

# ಸನಾತನ ಧರ್ಮ ಸಂರಕ್ಷಿಸಬೇಕಿದೆ



**ಮಲೇಬೆನ್ನೂರು**

ಮಲೇಬೆನ್ನೂರು, ಜೂ.16- ಪ್ರಸಕ್ತ ದಿನ ಸನಾತನ ಧರ್ಮ ಸಂರಕ್ಷಿಸುವ ಅವಶ್ಯಕತೆ ಇದೆ ಎಂದು ಕನಕಪುರ ತಾಲ್ಲೂಕು ಮರಳವಾಡಿ ಆಶ್ರಮದ ಸತೀಶ್ ಗುರೂಜಿ ಅಭಿಪ್ರಾಯಪಟ್ಟರು.

ಅವರು, ಕೊಮಾರನಹಳ್ಳಿಯ ಶ್ರೀ ರಂಗನಾಥ ಸ್ವಾಮಿ ದೇವಾಲಯದ ಸಭಾಭವನದಲ್ಲಿ ಶ್ರೀ ಕಾಂತಾನಂದ ಸರಸ್ವತಿ ಮಹಾರಾಜರ 12ನೇ ಸನ್ಯಾಸ ದೀಕ್ಷಾ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಪಾಶ್ಚಾತ್ಯ ಸಂಸ್ಕೃತಿ ಪ್ರಭಾವಕ್ಕೆ ಮಣಿದು ಹಣ ಮಾಡುವತ್ತ ವಿದೇಶದ ಕಡೆ ತೆರಳುವವರ ಸಂಖ್ಯೆ ಹೆಚ್ಚಾಗಿದೆ. ವ್ಯಾವಹಾರಿಕವಾಗಿ ಬೇಕಾಗುವ ಹಣದಿಂದ ಎಲ್ಲ ಸಾಧ್ಯವಿಲ್ಲ, ಶಾಂತಿ ನೆಮ್ಮದಿಗೆ, ಧರ್ಮ ಸಂರಕ್ಷಣೆ ಜೊತೆ ಸಮಾಜವನ್ನು ಸನ್ಮಾರ್ಗಕ್ಕೆ ತರುವ ಶಕ್ತಿ ಗುರುವಿಗೆ ಮಾತ್ರ ಇದೆ ಎಂದು ಪ್ರತಿಪಾದಿಸಿದರು.

'ಸನ್ಯಾಸ ಆಶ್ರಮ ಶ್ರೇಷ್ಠ' ಎಂದು ಶಿವಮೊಗ್ಗದ ಸತ್ ಉಪಾಸಿ ದಿವ್ಯಾಶ್ರಮದ ಬ್ರಹ್ಮಾನಂದ ತೀರ್ಥ ಭಿಕ್ಷು ಅಭಿಪ್ರಾಯಪಟ್ಟರು. ಸನ್ಯಾಸಿ ಎಲ್ಲ ತೊರೆದವನು. ಅನೇಕರು ಸನ್ಯಾಸ ದೀಕ್ಷೆ ಪಡೆದು ಸ್ವಾಮಿ ಗಳಾಗಿ ಪುನಃ ಗೃಹಸ್ಥಾಶ್ರಮಕ್ಕೆ ಮರಳಿದ್ದಾರೆ. ಆದರೆ, ಸನ್ಯಾಸ ದೀಕ್ಷೆಗೂ ಮುನ್ನ ಹಲವಾರು ಧಾರ್ಮಿಕ ವಿಧಿ, ವಿಧಾನ ಅನುಸರಿಸಿ ವಿರಜಾ ಹೋಮ, ಅಷ್ಟ ಸಂಸ್ಕಾರ ಪಡೆದ ಕಾರಣ ಧಾರ್ಮಿಕವಾಗಿ ಸಾಧ್ಯವಿಲ್ಲ ಎಂದರು.

ಹೊಸದುರ್ಗದ ಸದ್ಗುರು ಸೇವಾಶ್ರಮದ ಕಾಂತಾನಂದ ಸರಸ್ವತಿ ಮಹಾರಾಜ್ ಮಾತನಾಡಿ, ಪ್ರತಿವರ್ಷ ತಮ್ಮ ಸನ್ಯಾಸ ಸ್ವೀಕಾರ ದಿನವನ್ನು ಕೊಮಾರನಹಳ್ಳಿ ಸುಕ್ಷೇತ್ರದಲ್ಲಿ ಆಚರಿಸಿಕೊಳ್ಳುವುದಾಗಿ ಘೋಷಿಸಿದರು.

ಉಪತಹಶೀಲ್ದಾರ್ ಆರ್.ರವಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಸಹಸ್ರಾರು ಸಂಖ್ಯೆ ಭಕ್ತರು ಆಗಮಿಸಿದ್ದರು. ಹೊಳೆನರಸೀಪುರದ ಜಯಣ್ಣ ಸ್ವಾಗತಿಸಿದರು. ನಾಗಭೂಷಣ್ ವಂದಿಸಿದರು.

# ದಾವಣಗೆರೆ ಕೇವಲ ಬೆಣ್ಣೆದೋಸೆ, ಖಾರಾ- ಮಂಡಕ್ಕಿ ನಗರವಾಗದಿರಲಿ

## ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್

ದಾವಣಗೆರೆ, ಜೂ.16- ದಾವಣಗೆರೆ ಎಂದರೆ ಕೇವಲ ಬೆಣ್ಣೆದೋಸೆ, ಖಾರಾ-ಮಂಡಕ್ಕಿ ನಗರಿ ಆಗದೆ ಸುಂದರ 'ಉದ್ಯಾನವನ ನಗರಿ' ಎಂದು ಕರೆಸಿಕೊಳ್ಳಬೇಕಾಗಿದೆ ಎಂದು ಶಾಸಕ ಎಸ್. ಎ. ರವೀಂದ್ರನಾಥ್ ಆಶಿಸಿದರು.



ವಿದ್ಯಾನಗರದ ಎಸ್. ಎ. ರವೀಂದ್ರನಾಥ್ ಉದ್ಯಾನವನದಲ್ಲಿ ಶಾಸಕರು ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು. ಪರಿಸರದ ರಕ್ಷಣೆಯನ್ನು ಎಲ್ಲರೂ ಸೇರಿ ಮಾಡಬೇಕು.

ಪರಿಸರ ರಕ್ಷಣೆಯಿಂದ ನಮ್ಮ ಮುಂದಿನ ಭವಿಷ್ಯ ಉತ್ತಮವಾಗಿರುವುದು. ನನ್ನ ಆಡಳಿತಾವಧಿಯಲ್ಲಿ ಅನೇಕ ಪಾರ್ಕ್‌ಗಳ ಅಭಿವೃದ್ದಿಗೆ ಅನುದಾನವನ್ನು ನೀಡಿದ್ದೇನೆ. ವಿದ್ಯಾನಗರ ಉದ್ಯಾನವನಕ್ಕೂ ಕೂಡ ಹೆಚ್ಚಿನ ಅನುದಾನ ನೀಡಿದ್ದೇನೆ. ಇನ್ನು ಮುಂದೆಯೂ ಕೂಡ ಅಭಿವೃದ್ಧಿಗೆ ನಾನು ಅನುದಾನವನ್ನು ನೀಡುತ್ತೇನೆ. ಇನ್ನೂ ಹಲವಾರು ಉದ್ಯಾನವನಗಳು ಅಭಿವೃದ್ಧಿಯಾಗಬೇಕಾಗಿದೆ. ಸಾರ್ವಜನಿಕರು, ಪರಿಸರ ಪ್ರೇಮಿಗಳು ಇದಕ್ಕೆ ಕೈಜೋಡಿಸಬೇಕೆಂದು ಕರೆ ನೀಡಿದರು.

ಉದ್ಯಾನವನದ ಹಿರಿಯ ನಾಗರಿಕರ ವೇದಿಕೆಯ ಕಾರ್ಯದರ್ಶಿ ದಿಳ್ಯಪ್ಪ ಸ್ವಾಗತಿಸಿದರು. ನಿವೃತ್ತ ಪರಿಸರ ಅಧಿಕಾರಿ ಕೊಟ್ರೇಶ್, ಮಹಾನಗರಪಾಲಿಕೆ ಸದಸ್ಯರಾದ ಪ್ರಸನ್ನ ಕುಮಾರ್, ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಕರಿಯಣ್ಣ, ಜಯಣ್ಣ, ಕೆಂಚನಗೌಡ್ರು, ಬಸವರಾಜ ಗಡದ್, ವಿನಯ್ ದಿಳ್ಯಪ್ಪ, ಗಿರೀಶ್ ಎಸ್.ದೇವರಮನಿ, ನಾಗರಾಜ್ ಸುರ್ವೆ, ಪ್ರಸನ್ನ ಬೆಳಕೇರಿ ಹಾಗೂ ಇತರರು ಉಪಸ್ಥಿತರಿದ್ದರು .


**ಬೇಕಾಗಿದ್ದಾರೆ**

**ಮೆ|| ಆರ್. ಹನುಮಂತಪ್ಪ ಅಂಡ್ ಸನ್** ಸಂಸ್ಥೆಯಲ್ಲಿ **ವಾಚ್‌ಮನ್** (ಓದು, ಬರಹ ಬಲ್ಲವರು) ಮತ್ತು ಶ್ರೀ ಲಾಡ್ಜ್‌ನಲ್ಲಿ ಕಂಪ್ಯೂಟರ್ ಜ್ಞಾನ ಮತ್ತು ಅನುಭವ ಹೊಂದಿರುವವರು **ಸೂಪರ್ ವೈಸರ್** ಮತ್ತು **ರೂಮ್ ಬಾಯ್** ಎರಡೂ ಹುದ್ದೆಗಳಿಗೆ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸಿದ್ಧವಿರುವ ಕೆಲಸಗಾರರು ಬೇಕಾಗಿದ್ದಾರೆ. ಆಸಕ್ತರು ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

**ಮೆ|| ಆರ್. ಹನುಮಂತಪ್ಪ ಅಂಡ್ ಸನ್**
ಹನುಮಂತಪ್ಪನವರ ಕಟ್ಟಡ, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ-577002.
ದೂರವಾಣಿ: **08192-258834 /258836**



**ವಿದೇಶ ಪ್ರವಾಸ - ಶುಭ ಹಾರೈಕೆ**



ದಿನಾಂಕ 18.06.2022ರ ಶುಕ್ರವಾರ ಕ್ರೊಯೇಶಿಯಾ (Croatia) ದೇಶಕ್ಕೆ ಪ್ರಯಾಣ ಬೆಳೆಸುತ್ತಿರುವ

**ಪ್ರದೀಪ್ ಎಂ. ರಡ್ಡೇರ**

ಅವರ ಪ್ರಯಾಣ ಸುಖಕರವಾಗಿರಲಿ ಎಂದು ಹಾರೈಸುವ

ಶುಭ ಕೋರುವವರು:

**ಕಿಶೋರ್ ಎಲೆಕ್ಟ್ರಿಕಲ್ಸ್**, ದಾವಣಗೆರೆ
**ಆದಿ ಡಿಸ್ಟ್ರಿಬ್ಯೂಟರ್ಸ್**, ದಾವಣಗೆರೆ
**ಆರ್.ಜೆ. ಎಂಟರ್ ಪ್ರೈಸಸ್**, ದಾವಣಗೆರೆ
**ಮಾಲೀಕರು ಮತ್ತು ಸಿಬ್ಬಂದಿ ವರ್ಗ**


# ಎರಡು ವಸತಿ ನಿಲಯ ಉದ್ಘಾಟಿಸಿದ ಶಾಸಕ ಕರುಣಾಕರ ರೆಡ್ಡಿ



**ಹರಪನಹಳ್ಳಿ**

ಹರಪನಹಳ್ಳಿ, ಜೂ.16- ಪಟ್ಟಣದಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಎರಡು ವಸತಿ ನಿಲಯಗಳನ್ನು ಗುರುವಾರ ಶಾಸಕ ಜಿ. ಕರುಣಾಕರ ರೆಡ್ಡಿ ಉದ್ಘಾಟಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಟಿಪಿ ಯೋಜನೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪಟ್ಟಣದ ಬಾಪೂಜಿನಗರ ಹಿಂಭಾಗದ ಹೊಂಬಳಗಟ್ಟಿ ರಸ್ತೆಗೆ ಹೊಂದಿಕೊಂಡಿರುವ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ಜಿ-ಪ್ಲಸ್2 ಮಾದರಿಯ ಒಟ್ಟು 5 ಕೋಟಿ ರೂ.ಗಳ ವೆಚ್ಚದಲ್ಲಿ ನೂತನ ಸುಸಜ್ಜಿತವಾದ ಕೊಠಡಿಗಳನ್ನು ನಿರ್ಮಿಸಲಾಗಿದೆ.

ಈ ಕಟ್ಟಡದಲ್ಲಿ ಗ್ರಂಥಾಲಯ, ಅಡುಗೆ ಕೋಣೆ, ಕಚೇರಿ ಹಾಗೂ ವಿದ್ಯಾರ್ಥಿಗಳ ಕೊಠಡಿಗಳು ಒಳಗೊಂಡು ಒಟ್ಟು 40 ಕೊಠಡಿಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಮಾಹಿತಿ ನೀಡಿದ ಅವರು, ವಿಶೇಷವಾಗಿ ಈ ವಸತಿ ನಿಲಯಕ್ಕೆ ಜಿಲ್ಲೆಯಲ್ಲಿಯೇ ಪ್ರಪ್ರಥಮವಾಗಿ ಶುದ್ದ ಕುಡಿಯುವ ನೀರಿನ ಘಟಕ ಹಾಗೂ ನೀರಿನ ಪುನರ್ ಬಳಕೆ ಮಾಡಿಕೊಳ್ಳುವ ತಂತ್ರಜ್ಞಾನ ಅಳವಡಿಸಲಾಗಿದೆ ಎಂದರು.

ನಂತರ ಪಟ್ಟಣದ ಕೆಎಸ್‌ಆರ್‌ಟಿಸಿ ಡಿಪೋ ಹಿಂಭಾಗದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ಜಿ-ಪ್ಲಸ್ 3 ಮಾದರಿಯ ಒಟ್ಟು 7 ಕೋಟಿ ರೂಗಳ. ವೆಚ್ಚದಲ್ಲಿ ನಿರ್ಮಾಣ ಗೊಂಡಿರುವ ಒಟ್ಟು 97 ಕೊಠಡಿಗಳಿರುವ ವಸತಿ ನಿಲಯವನ್ನು ಉದ್ಘಾಟಿಸಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ರೇಣುಕಾದೇವಿ ಮಾತನಾಡಿ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಮೂರು ವಸತಿ ನಿಲಯಗಳ ಅವಶ್ಯಕತೆ ಇದ್ದು, ಪ್ರಸ್ತುತ ಒಂದು ವಸತಿ ನಿಲಯ ಮಂಜೂರಾಗಿದ್ದು ಸ್ಥಳದ ಅಗತ್ಯವಿದೆ, ಈ ಸಂಬಂಧ ಶಾಸಕರಾದ ಜಿ.ಕರುಣಾಕರ ರೆಡ್ಡಿ ಅವರ ಗಮನಕ್ಕೆ ತರಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಹೆಚ್.ಅಶೋಕ, ಜಾವೀದ್, ರೊಕ್ಕಪ್ಪ, ಕಿರಣ್‌ಕುಮಾರ, ಹನುಮಂತಪ್ಪ, ಬಿಜೆಪಿ ಮುಖಂಡರಾದ ಆರ್.ಲೋಕೇಶ್, ಬಾಗಳಿ ಕೊಟ್ರೇಶಪ್ಪ, ಕಣಿವಿಹಳ್ಳಿ ಮಂಜುನಾಥ, ಎಂ.ಮಲ್ಲೇಶ್, ಪ್ರಥಮ ದರ್ಜೆ ಗುತ್ತಿಗೆದಾರ ಶ್ರೀನಿವಾಸರೆಡ್ಡಿ, ಶಿರಗಾನಹಳ್ಳಿ ವಿಶ್ವನಾಥ, ಸಿಬ್ಬಂದಿ ಗಳಾದ ಎನ್.ಜಿ.ಬಸವರಾಜ, ರಾಘವೇಂದ್ರ, ಯಲ್ಲಮ್ಮ ಸುನೀತ, ನಿಂಗರಾಜ, ಯು.ಪಿ.ನಾಗರಾಜ, ಪೂರ್ಯನಾಯ್ಕ, ಶಿವಾನಂದ ಸೇರಿದಂತೆ ಅನೇಕರು ಇದ್ದರು.

## ಕರುಣಾದಿಂದ ಸ್ಕಾಲರ್ ಶಿಪ್‌ಗೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.16 - ತಂದೆಯನ್ನು ಕಳೆದುಕೊಂಡು ಆರ್ಥಿಕವಾಗಿ ದುರ್ಬಲರಾದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯಲ್ಲಿ 80% ಅಂಕ ಗಳಿಸಿ ತಮ್ಮ ಮುಂದಿನ ಶಿಕ್ಷಣವನ್ನು ಸರ್ಕಾರಿ ಕಾಲೇಜಿನಲ್ಲಿ ಮುಂದುವರೆಸುವ ವಿದ್ಯಾರ್ಥಿನಿಯರು ಸ್ಕಾಲರ್ ಶಿಪ್‌ಗಾಗಿ ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ಗೆ – ಅರ್ಜಿ ಸಲ್ಲಿಸಬಹುದು. ಸಂಪರ್ಕ ವಿಳಾಸ ಕರುಣಾ ಜೀವ ಕಲ್ಯಾಣ ಟ್ರಸ್ಟ್, ಮಾಮಾಸ್ ಜಾಯಿಂಟ್ ರಸ್ತೆ, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಶಂಕರ್ ಪ್ಲಾಜಾ ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.


**ಡಾ. ಶಾಮನೂರು ಶಿವಶಂಕರಪ್ಪನವರಿಗೆ 92ನೇ ಹುಟ್ಟು ಹಬ್ಬದ ಶುಭಾಶಯಗಳು**



ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ ಹಾಗೂ ಕೊಡುಗೈ ದಾನಿಗಳೂ ಆದ **ಡಾ. ಶಾಮನೂರು ಶಿವಶಂಕರಪ್ಪ** ಅವರಿಗೆ ದೇವರು ಆರೋಗ್ಯ ಭಾಗ್ಯ ಕೊಟ್ಟು ಕರುಣಿಸಲೆಂದು ಹಾರೈಸುವ,

ಶುಭ ಕೋರುವವರು :

ಎನ್. ನೀಲಗಿರಿಯಪ್ಪ,
ಕಾಂಗ್ರೆಸ್ ಮುಖಂಡರು, ಗಾಂಧಿನಗರ,
ಶ್ರೀಮತಿ ವೀಣಾ ಅಣ್ಣಪ್ಪಸ್ವಾಮಿ, ನಗರಸಭಾ ಮಾಜಿ ಸದಸ್ಯರು.
ಮತ್ತು ಕುಟುಂಬಸ್ಥರು.

# ಹರಿಹರ: ಹವಾಮಾನಾಧಾರಿತ ಬೆಳೆ ಯೋಜನೆ



ಹರಿಹರ, ಜೂ. 16 - ತೋಟಗಾರಿಕೆ ಇಲಾಖೆಯ 2022-23 ನೇ ಸಾಲಿನ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಕರಪತ್ರವನ್ನು ಶಾಸಕ ಎಸ್. ರಾಮಪ್ಪ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಸರ್ಕಾರ ಬೆಳೆ ಆಧಾರಿತ ವಿಮೆ ಯೋಜನೆಯನ್ನು ಜಾರಿಗೊಳಿಸಿರುವು ದರಿಂದ ಅಡಿಕೆ ಮತ್ತು ವೀಳ್ಯದೆಲೆ ಬೆಳೆದ ರೈತರಿಗೆ ಬಹಳ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲ ಆಗುತ್ತಿದ್ದು, ರೈತರು ಸರ್ಕಾರದ ಅನೇಕ ಯೋಜನೆಗಳನ್ನು ಸದುಪಯೋಗ ಪಡೆದುಕೊಂಡು ಉತ್ತಮ ಜೀವನ ನಡೆಸುವಂತೆ ತಿಳಿಸಿದರು.

ತೋಟಗಾರಿಕೆ ಇಲಾಖೆಯ ಎಇಇ ರೇಖಾ ಮಾತನಾಡಿ, 2022-23 ನೇ ಸಾಲಿನ ಮುಂಗಾರು ಹಂಗಾಮಿಗೆ ಗ್ರಾಮ ಪಂಚಾಯತಿ ಮಟ್ಟಕ್ಕೆ ಸರ್ಕಾರ ತಾಲ್ಲೂಕಿನಲ್ಲಿ ಮರು ವಿನ್ಯಾಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಫಸಲು ಕೊಡುತ್ತಿರುವ ಅಡಿಕೆ, ವೀಳ್ಯದೆಲೆ ಬೆಳೆಗಳನ್ನು ಇದರ ವ್ಯಾಪ್ತಿಯಲ್ಲಿ ಒಳಪಡಿಸಲಾಗಿರುತ್ತದೆ. ತಾಲ್ಲೂಕಿನಲ್ಲಿ ಯೋಜನೆಗೆ ಒಳಪಡಿಸಲಾಗುವ ಬೆಳೆಗಳಿಗೆ ಬೆಳೆ ಸಾಲ, ಬೆಳೆ ಸಾಲ ಪಡೆಯದ ರೈತರನ್ನು ಬೆಳೆ ವಿಮೆಗೆ ಒಳಪಡಿಸಲಾಗುತ್ತದೆ. ಬೆಳೆ ಸಾಲ ಪಡೆದ ಮತ್ತು ಪಡೆಯದ ರೈತರು ದಿನಾಂಕ 1.6.2022 ರಿಂದ 30.6.22 ರವರೆಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಆನ್ ಲೈನ್ (samrakshane.Karnataka.gov.in) ಮೂಲಕ ನೋಂದಾಯಿಸಲು ಅವಕಾಶ ಇರುತ್ತದೆ.

ಹರಿಹರ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯುವ ಗ್ರಾಮ ಪಂಚಾಯತಿಗಳಲ್ಲಿ ಯೋಜನೆಯಡಿ ವಿಮಾ ವ್ಯಾಪ್ತಿಗೆ ಒಳಪಡುತ್ತದೆ. ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ನಷ್ಟ ಪರಿಹಾರವನ್ನು ಅಂದಾಜಿಸಲು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕ್ಷೇತ್ರ ಘಟಕಗಳಲ್ಲಿ ಸ್ಥಾಪಿಸಿರುವ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರಗಳಲ್ಲಿ ದಾಖಲಾದ ಮಾಹಿತಿಯನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಪರಿಹಾರದ ಮೊತ್ತವನ್ನು ನೀಡಲು ಕಡಿಮೆ ಮಳೆ, ಅಧಿಕ ಮಳೆ, ಅಧಿಕ ಆರ್ದ್ರತೆ, ಅತಿಯಾದ ಗಾಳಿಯ ವೇಗ, ಉಷ್ಣಾಂಶ, ಸೇರಿದಂತೆ ಪ್ರಮುಖ ರೋಗಗಳನ್ನು ಪರಿಗಣಿಸ ಲಾಗುವುದು.

ಹರಿಹರ ತಾಲ್ಲೂಕಿನಲ್ಲಿ ಅಡಿಕೆ ವಿಮೆ ವ್ಯಾಪ್ತಿಗೆ ಒಳಪಡುವ ಗ್ರಾಮ ಪಂಚಾಯತಿಗಳು ಬನ್ನಿಕೋಡು, ಬೆಳ್ಳೂಡಿ, ಭಾನುವಳ್ಳಿ, ದೇವರ ಬೆಳಕರಿ, ಗುತ್ತೂರು, ಹಾಲಿವಾಣ, ಹನಗವಾಡಿ, ಹರಳಹಳ್ಳಿ, ಹರ್ಲಾಪುರ, ಹೊಳೆಸಿರೆಗೆರಿ, ಜಿಗಳಿ, ಕೆ. ಬೇವಿನಳ್ಳಿ, ಕಡರನಾಯಕನಹಳ್ಳಿ, ಕೊಕ್ಕನೂರು, ಕೊಂಡಜ್ಜಿ, ಕುಂಬಳೂರು, ಕುಣೆಬೆಳಕೆರೆ, ಮಲೆಬೆನ್ನೂರು, ನಂದಿಗಾವಿ, ರಾಜನಹಳ್ಳಿ, ಸಾಲಕಟ್ಟೆ, ಉಕ್ಕಡಗಾತ್ರಿ, ವಾಸನ, ಯಲವಟ್ಟಿ, ಎಳೆಹೊಳೆ, ಸಾರಥಿ, ಹರಿಹರ.

ವಿಮೆ ಮೊತ್ತ ಪ್ರತಿ ಹೆಕ್ಟೇರ್ ಗೆ ಅಡಿಕೆಗೆ 128000 ರೈತರು ಪಾವತಿ ಮಾಡಬೇಕಾದ ಮೊತ್ತ ಶೇ 5, ರಷ್ಟು 6400 ಕೊಯ್ಲು ಹಂತದ ವೀಳ್ಯದೆಲೆ 117000 ರೈತರು ಪಾವತಿ ಮಾಡುವ ಮೊತ್ತ 5850 ರೂ. ಜಮೀನಿನ ಪಾಣಿ, ಉಳಿತಾಯ ಖಾತೆ, ಪಾಸ್ ಬುಕ್, ಆಧಾರ್ ಕಾರ್ಡ್, ಸ್ವಯಂ ಘೋಷಿತ ಬೆಳೆ ಧೃಡಿಕರಣ ಪತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ನೀಡಿ ಪಡೆಯವಂತೆ ಹೇಳಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಜಿಲ್ಲಾ ನಿರ್ದೇಶಕ ತಿಪ್ಪೇಸ್ವಾಮಿ, ಹರಿಹರ ತಾಲ್ಲೂಕು ಕೃಷಿ ನಿರ್ದೇಶಕ ನಾರನಗೌಡ, ಪಿಎಲ್ ಡಿ ಬ್ಯಾಂಕ್ ನಿರ್ದೇಶಕ ಹನಗವಾಡಿ ಪ್ರಸನ್ನ, ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಮಾಜಿ ಸದಸ್ಯ ಹಂಚಿನ ನಾಗಪ್ಪ, ಕೃಷಿ ಇಲಾಖೆ ಸಿಬ್ಬಂದಿ ಶರತ್ , ರೂಪಾ ಇತರರು ಹಾಜರಿದ್ದರು.

# ಬದುಕು ಹಸನುಗೊಳಿಸಲು ಪಾದಯಾತ್ರೆ



## ರಾಣೇಬೆನ್ನೂರು ತಾಲ್ಲೂಕಿನ ಪಂಚಮಸಾಲಿ ಸಮಾಜದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್

ರಾಣೇಬೆನ್ನೂರು, ಜೂ. 16- ಅಧಿಕಾರಕ್ಕಾಗಿ ಪಾದಯಾತ್ರೆ, ಹೋರಾಟಗಳು ನಡೆಯುತ್ತವೆ. ಆದರೆ ಕೂಡಲಸಂಗಮದ ಸ್ವಾಮೀಜಿ ಪಾದಯಾತ್ರೆ ಪಂಚಮಸಾಲಿ ಸಮಾಜದ ಕಟ್ಟಕಡೆಯ ಮನುಷ್ಯನ ಬದುಕು ಹಸನುಗೊಳಿಸಲು ಎಂದು ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಹೇಳಿದರು.

ಅವರು ತಾಲ್ಲೂಕಿನ ನದಿಹರಳಹಳ್ಳಿ ಗ್ರಾಮದಲ್ಲಿ ಪಂಚಮಸಾಲಿ ಸಮಾಜದ ಸಭೆಯನ್ನ ಉದ್ಘಾಟಿಸಿ ಮಾತನಾಡಿದರು.

ಶ್ರೀ ಜಯಮೃತ್ಯುಂಜಯ ಸ್ವಾಮಿಗಳು ತಮಗೆ ಬೇಕಾದ ರಾಜಕಾರಣಿಗಳಿಗೆ ಸಚಿವ ಸ್ಥಾನ, ನಿಗಮ ಮಂಡಳಿ ಮುಂತಾದ ಅಧಿಕಾರದ ಕುರ್ಚಿ ಕೊಡಿಸಿ ಮಠಕ್ಕೆ ಸರ್ಕಾರದ ಅನುದಾನ ಪಡೆದುಕೊಳ್ಳುವವರಲ್ಲ. ತಮ್ಮ ಭೋಗ ಜೀವನವನ್ನು ತ್ಯಾಗ ಮಾಡಿ, ಸಮಾಜದ ಏಳ್ಗೆಗೆ ತಮ್ಮ ಬದುಕನ್ನು ಅರ್ಪಿಸಿದವರು. ಅವರ ಹಿಂದೆ ಪಂಚಮಸಾಲಿ ಸಮೂಹವಿದೆ ಎಂದು ಶಿವಶಂಕರ್ ವಿವರಿಸಿದರು.

ಪಂಚಮಸಾಲಿ ಸಮಾಜವನ್ನು ಉಪಯೋಗಿಸಿಕೊಂಡು ಮತ್ತೆ ಶಾಸಕನಾಗುವ ಹಪಾಹಪಿ ನನಗಿಲ್ಲ. ನಾನಾಗಲೀ ನಮ್ಮ ತಂದೆಯಾಗಲೀ ಎಲ್ಲರನ್ನೂ ಕಟ್ಟಿಕೊಂಡು ಬದುಕಿದವರು. ಸ್ವಾಮೀಜಿ ಅವರ ಗುರಿ ಯಾರಿಗೋ ಅಧಿಕಾರ ಕೊಡಿಸುವುದು ಅಲ್ಲಾ. ಅವರು ಸಮಾಜಕ್ಕಾಗಿ, ಸಮಾಜದ ಕಟ್ಟಕಡೆಯ ಮನುಷ್ಯನಿಗಾಗಿ ಹೋರಾಟ ನಡೆಸಿದ್ದಾರೆ ಎಂದು ಶಿವಶಂಕರ್ ಹೇಳಿದರು.

2ಎ ಮೀಸಲಾತಿಗಾಗಿ ದಿನಾಂಕ 27 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಶಿಗ್ಗಾಂವಿ ಮನೆ ಎದುರು ಒಂದು ದಿನದ ಧರಣಿ ನಡೆಸಲು ಎಲ್ಲ ತಾಲ್ಲೂಕಳಿಗೆ ಸಂಚರಿಸುತ್ತಿರುವದಾಗಿ ಹೇಳಿದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ, ಅಂದು ಶಿಗ್ಗಾಂವಿಯಲ್ಲಿ ಮೊಳಗುವ ಪಂಚಮಸಾಲಿ ಕಹಳೆ ವಿಧಾನಸೌಧಕ್ಕೆ ಅಪ್ಪಳಿಸಲಿದೆ. ಈ ಕಹಳೆ ಯಾರ ವಿರುದ್ದವಲ್ಲ. ಪಂಚಮಸಾಲಿ ಸಮಾಜ ತನ್ನ ಹಕ್ಕು ಪಡೆಯಲು ಎಂದು ಹೇಳಿದರು.

ಸಮಾಜದ ಮುಖಂಡರಾದ ಕೆ. ಶಿವಲಿಂಗಪ್ಪ, ಭಾರತಿ ಜಂಬಗಿ, ಎ.ಬಿ.ಪಾಟೀಲ, ಸಿದ್ದು ಚಿಕ್ಕಬಿದರಿ, ಶಿವಪ್ಪ ಗುರಿಕಾರ, ಸಂತೋಷ ಪಾಟೀಲ, ಗಂಗಾಧರ ಬೂದನೂರ, ಬಿ.ಸಿ ಹನುಮಗೌಡ್ರ, ಅಮೋಘ ಬಾದಾಮಿ ಪಂಚಮಸಾಲಿ ಸಮಾಜದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

### ರಾಜಾಹುಲಿ ವಿರೋಧ...

ಮುಖ್ಯಮಂತ್ರಿ ಬಹಳ ಒಳ್ಳೆಯವರು. ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ಕೊಡುವ ಮನಸ್ಸಿದೆ. ಆದರೆ ನಮ್ಮ ರಾಜಾಹುಲಿ ಅಡ್ಡಿ ಪಡಿಸುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಸರು ಹೇಳದೆ ಸಭೆಯಲ್ಲಿ ಪ್ರಸ್ತಾಪಿಸಿದ ಶ್ರೀ ಗಳು ಇಂತಹ ಎಷ್ಟೇ ರಾಜಾ ಹುಲಿಗಳು ಬಂದರೂ ಮೀಸಲಾತಿ ತಪ್ಪಿಸಲು ಸಾಧ್ಯವಿಲ್ಲ. ಅದು ನಮ್ಮ ಹಕ್ಕು. ಅದನ್ನು ಪಡದೇ ಪಡೆಯುತ್ತೇವೆ ಎಂದು ಶ್ರೀ ಗಳು ದೃಢವಾದ ಮಾತಗಳನ್ನು ವ್ಯಕ್ತಪಡಿಸಿದರು.

# ಎಸ್.ಎಸ್. ಆಸ್ಪತ್ರೆಯಲ್ಲಿ ವಿಶ್ವ ಪೂರಕ ಆಹಾರ ದಿನಾಚರಣೆ



ದಾವಣಗೆರೆ, ಜೂ. 16- ನಗರದ ಎಸ್.ಎಸ್. ಆಸ್ಪತ್ರೆಯ ನರ್ಸಿಂಗ್ ವಿದ್ಯಾರ್ಥಿಗಳಿಗೆ ವಿಶ್ವ ಪೂರಕ ಆಹಾರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿದ ಮಕ್ಕಳ ತಜ್ಞರಾದ ಡಾ. ಜಿ.ಎಸ್. ಲತಾ ಅವರು, ಮಕ್ಕಳಿಗೆ ಪೂರಕ ಆಹಾರದ ಮಹತ್ವ ಹಾಗೂ ಯಾವ ರೀತಿ ಆಹಾರವನ್ನು ಕೊಡಬೇಕು ಎಂಬುದರ ಬಗ್ಗೆ ಮಾಹಿತಿ ನೀಡಿದರು.

ವೈದ್ಯಕೀಯ ನಿರ್ದೇಶಕ ಡಾ. ಅರುಣ್ ಕುಮಾರ್ ಅಜ್ಜಪ್ಪನವರ್ ಕಾರ್ಯಕ್ರಮಕ್ಕೆ ಶುಭ ಕೋರಿ ಮಾತನಾಡಿದರು.

ನರ್ಸಿಂಗ್ ಕಾಲೇಜು ಪ್ರಾಂಶುಪಾಲರಾದ ಎನ್.ಬಿ. ವೀರೇಶ್ ಅವರು, ನರ್ಸಿಂಗ್ ಮಹತ್ವ, ಪೂರಕ ಆಹಾರದ ಬಗ್ಗೆ ತಾಯಂದಿರಿಗೆ ತಿಳಿ ಹೇಳುವುದು ಅವಶ್ಯ ಎಂದರು. ನರ್ಸಿಂಗ್ ವಿದ್ಯಾರ್ಥಿಗಳು ತಯಾರಿಸಿದ ವಿವಿಧ ಪೂರಕ ಆಹಾರದ ಪ್ರಾತ್ಯಕ್ಷಿಕೆ ಹಾಗೂ ಆಹಾರ ತಯಾರಿಸುವ ವಿಧಾನವನ್ನು ಸಾರ್ವಜನಿಕರಿಗೆ ಆಸ್ಪತ್ರೆಯ ಆವರಣದಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಎನ್.ಬಿ. ವೀರೇಶ್, ವೇಣು, ಚಿರಂತನ್, ನವೀನ್, ಅಂಬಿಕಾ, ಮಮತ ಸೇರಿದಂತೆ ನರ್ಸಿಂಗ್ ಸಿಬ್ಬಂದಿ, ವೈದ್ಯಕೀಯ ವಿದ್ಯಾರ್ಥಿಗಳು, ತಾಯಂದಿರು ಭಾಗವಹಿಸಿದ್ದರು.

# ಸರ್ಕಾರಿ, ಅನುದಾನಿತ ಪಾಲಿಟೆಕ್ನಿಕ್ ಡಿಪ್ಲೋಮಾ ಕೋರ್ಸು; ಪ್ರವೇಶಕ್ಕೆ ಅರ್ಜಿ

ದಾವಣಗೆರೆ,ಜೂ.16- ಸರ್ಕಾರಿ ಹಾಗು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಪೂರ್ಣಾವಧಿಯ ಇಂಜನಿಯರಿಂಗ್ ಮತ್ತು ನಾನ್ ಇಂಜನಿಯರಿಂಗ್ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆಯಲು ಇದೇ ದಿನಾಂಕ 20ರವರೆಗೆ ವಿಸ್ತರಿಸಲಾಗಿದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ಹರಪನಹಳ್ಳಿಯಲ್ಲಿ ಪಿಯು ಪ್ರವೇಶಾತಿಗಾಗಿ ನೂಕುನುಗ್ಗಲು : ಪೋಷಕರ ಪ್ರತಿಭಟನೆ



ಹರಪನಹಳ್ಳಿ, ಜೂ. 16- ಪ್ರಥಮ ಮತ್ತು ದ್ವಿತೀಯ ಪಿಯುಸಿಯ ದಾಖಲಾತಿ ಅಂತಿಮ ದಿನವಾದ ಇಂದು ವಿದ್ಯಾರ್ಥಿ, ಪೋಷಕರು ಪಟ್ಟಣದ ಎಸ್.ಎಸ್.ಎಚ್. ಜೈನ್ ಪಿಯು ಕಾಲೇಜು ಮುಂದೆ ಮುಗಿಬಿದ್ದಿರುವುದು ಕಂಡುಬಂತು.

ಈ ವೇಳೆ ವಿವಿಧ ವಿದ್ಯಾರ್ಥಿ ಸಂಘಟನೆಯ ಮುಖಂಡರು ಪ್ರವೇಶ ಪಡೆಯಲು ನಾಮಫಲಕದಲ್ಲಿ ಜೂ.15 ಕೊನೆ ದಿನವೆಂದು ನಮೂದಾಗಿದೆ. ಆದರೆ ಕಳೆದ 10 ದಿನಗಳಿಂದ ಪ್ರಾಚಾರ್ಯರು ಹಾಗೂ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರು ಈವರೆಗೂ ಕಾಲೇಜಿನ ಬಳಿ ಇರುವುದಿಲ್ಲ, ಆದರೂ ದಿಢೀರ್‌ನೇ ನಾಮಫಲಕದಲ್ಲಿ ಜೂ.16ರಿಂದ ದಂಡ ಶುಲ್ಕದೊಂದಿಗೆ ದಾಖಲಾತಿ ಮಾಡಿಕೊಳ್ಳಲಾಗುವುದು ಎಂದು ಹಾಕಲಾಗಿದೆ. ಇದರಿಂದ ಪೋಷಕರು, ವಿದ್ಯಾರ್ಥಿ, ಸಂಘಟಕರು ಆಕ್ರೋಶಗೊಂಡು ದಾಖಲಾತಿ ಮಾಡಿಕೊಳ್ಳುತ್ತಿರುವ ಕೊಠಡಿಗೆ ನುಗ್ಗಿ ಸಿಬ್ಬಂದಿ ಜೊತೆಗೆ ವಾಗ್ವಾದ ನಡೆಸಿ, ನಂತರ ಕೊಠಡಿ ಬಾಗಿಲು ಬಂದ್ ಮಾಡಿಸಿ, ಪ್ರತಿಭಟಿಸಿದರು.

ಈ ವೇಳೆ ಮಾರಪ್ಪ ಮಾತನಾಡಿ, ಈ ಹಿಂದೆ ವಿದ್ಯಾರ್ಥಿಗಳ ಪ್ರವೇಶಾತಿಯಿಂದ ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆದಿದ್ದು, ಆದರೆ ಇದೀಗ ಸಂಸ್ಥೆ ಮನಬಂದಂತೆ ಸರ್ಕಾರದ ಮಾನದಂಡಗಳನ್ನು ಮೀರಿ ಹೆಚ್ಚಿನ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ಆದರೆ ಸೌಲಭ್ಯಗಳು ಮಾತ್ರ ಯಾವುದು ಸೂಕ್ತವಾಗಿರುವುದಿಲ್ಲ.

ಈ ಕುರಿತು ಉಪನಿರ್ದೇಶಕರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ ಸಂಪರ್ಕಕ್ಕೆ ಸಿಗದೆ ದೂರವಾಣಿ ಕರೆ ಸ್ವೀಕರಿಸಲಿಲ್ಲ.

ಈ ಸಂದರ್ಭದಲ್ಲಿ ತಲುವಾಗಲು ಚಂದ್ರಪ್ಪ, ಬಾಗಳಿ ಸಿ. ರವೀಂದ್ರ, ಪುಣಭಗಟ್ಟಿ ಮಂಜುನಾಥ, ಪ್ರಶಾಂತ, ವೀರೇಶ್, ಶೇಖಪ್ಪ ಹಾಗೂ ವಿದ್ಯಾರ್ಥಿಗಳು, ಪೋಷಕರು ಇದ್ದರು.

# ಹೂವಿನಹಡಗಲಿ : ಎಸ್.ಆರ್.ಎಂ.ಪಿ.ಪಿ. ಕಾಲೇಜು ಅಭಿವೃದ್ಧಿ ಮಂಡಳಿ ರಚನೆ

ಹೂವಿನಹಡಗಲಿ, ಜೂ. 16- ಇಲ್ಲಿನ ಶ್ರೀಮತಿ ರುದ್ರಮ್ಮ ಎಂ.ಪಿ. ಪ್ರಕಾಶ್ ಕಾಲೇಜಿನ ಅಡಳಿತಾಭಿವೃದ್ಧಿ ಮಂಡಳಿಗೆ ರಾಜ್ಯ ಕಾಲೇಜು ಶಿಕ್ಷಣ ಇಲಾಖೆ ಅನುಮೋದನೆ ನೀಡಿ ಆದೇಶಿಸಿದೆ.

ಅಧ್ಯಕ್ಷರು : ಶಾಸಕ ಪಿ.ಟಿ. ಪರಮೇಶ್ವರನಾಯ್ಕ, ಪದಾಧಿಕಾರಿಗಳು : ಡಿ. ಮಲ್ಲೇಶನಾಯ್ಕ್, ಹೆಚ್. ಎಂ. ಕೊಟ್ರಯ್ಯ, ಜಿ. ಚಾತಪ್ಪ (ನಿವೃತ್ತ ಶಿಕ್ಷಣ ತಜ್ಞರು), ಕೆ. ಬಿ. ವೀರಭದ್ರಪ್ಪ, ಈಟಿ ಈರಣ್ಣ, ಜೆ. ಮಹೇಂದ್ರ (ಸ್ಥಳೀಯ ವ್ಯಾಪಾರಸ್ಥರು), ಹಣ್ಣಿ ಸುಶೀಲಮ್ಮ, ಎಂ. ಉಮೇಶ್, ಎಂ. ಶಾರದ (ಸ್ಥಳೀಯ ಕೈಗಾರಿಕೋದ್ಯಮಿಗಳು), ನಾಗೇಶ್ (ಪ.ಜಾ ಪ.ಪಂ. ಪ್ರತಿನಿಧಿ), ಈ.ಟಿ. ಲಿಂಗರಾಜು (ಒ .ಬಿ .ಸಿ . ಪ್ರತಿನಿಧಿ), ಕವಿತಾ ಎಸ್.ಎಸ್. ಪಾಟೀಲ್ ಮಹಿಳಾ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ.

# ಮಲೇರಿಯಾ ವಿರೋಧಿ ಮಾಸಾಚರಣೆ



**ಭಾನುವಳ್ಳಿ**

ಮಲೇಬೆನ್ನೂರು, ಜೂ.16- ಭಾನುವಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ತಾ. ಆರೋಗ್ಯಾಧಿಕಾರಿಗಳ ಕಚೇರಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಗ್ರಾ.ಪಂ ಅಧ್ಯಕ್ಷೆ ಶ್ರೀಮತಿ ನೇತ್ರಾವತಿ ಕೊಟ್ರೇಶ್ ಉದ್ಘಾಟಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಅವರು, ಮಳೆಗಾಲ ಪ್ರಾರಂಭವಾಗಿರುವುದರಿಂದ ಡೆಂಗ್ಯೂ, ಚಿಕನ್‌ಗುನ್ಯಾ, ಆನೆಕಾಲು ರೋಗಗಳು ಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಪ್ರತಿ ಗ್ರಾಮದಲ್ಲೂ ಸಾರ್ವಜನಿಕರಿಗೆ ಮತ್ತು ಶಾಲೆಗಳಲ್ಲಿ ಶಿಕ್ಷಕರನ್ನು ಕರೆದು ವಿದ್ಯಾರ್ಥಿಗಳಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವಂತೆ ತಿಳಿಸಲಾಗುತ್ತಿದೆ.

ವೈದ್ಯಾಧಿಕಾರಿ ಡಾ. ತಿಪ್ಪೇಸ್ವಾಮಿ ಮಾತನಾಡಿ, ಮನೆಯ ಸುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಿ. ಸೊಳ್ಳೆ ಮನೆಯೊಳಗೆ ಬಾರದಂತೆ ನೋಡಿಕೊಳ್ಳಿ ಮತ್ತು ಸೊಳ್ಳೆ ಪರದೆ ಬಳಸುವಂತೆ ತಿಳಿಸಿದರು.

ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ರಾಜಣ್ಣ, ತಾ. ಹಿರಿಯ ಪ್ರಾಥಮಿಕ ಸುರಕ್ಷಾಧಿಕಾರಿ ಸುಧಾ ಸುಲೇಖಾ, ಪಿಹೆಚ್‌ಸಿಓ ಹೆಚ್.ಕೆ.ಉಷಾ, ಎಂ.ಬಿ.ಸಾಕಮ್ಮ, ಪ್ರಯೋಗ ಶಾಲಾ ತಂತ್ರಜ್ಞ ಬಿ.ಎಂ.ರಘು, ಸಮುದಾಯ ಆರೋಗ್ಯಾಧಿಕಾರಿ ಜಯಶೀಲಾ, ಅಣ್ಣಪ್ಪ ಹಾಗೂ ಆಶಾ ಕಾರ್ಯಕರ್ತರು, ಶಿಕ್ಷಕರು ಭಾಗವಹಿಸಿದ್ದರು.

# ಡಿಪ್ಲೋಮಾ ಕೋ-ಆಪರೇಟಿವ್ : ತರಬೇತಿ

ದಾವಣಗೆರೆ ಜೂ.16- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ತರಬೇತಿ ಸಂಸ್ಥೆಗಳ ಮೂಲಕ ಸಹಕಾರ ಸಂಘ, ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಗೆ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ ನೀಡಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ : ಜಿಲ್ಲಾ ಸಹಕಾರ ಒಕ್ಕೂಟ, ಕಲಾಪ್ರಕಾಶ ವೃಂದ, 1ನೇ ಮಹಡಿ, ವಿನೋಬನಗರ 2ನೇ ಮುಖ್ಯರಸ್ತೆ, ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ.

# ಡಾ. ಜಯಣ್ಣ ಅವರಿಗೆ ಸನ್ಮಾನ



ಹರಪನಹಳ್ಳಿ, ಜೂ. 16- ಅಳಿಗಂಚಿಕೆರೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಸುತ್ತಲಿನ ಹಳ್ಳಿಗಳ ಪಂಚಮಸಾಲಿ ಸಮಾಜ ಬಾಂಧವರಿಗೆ ಕರೆದಿದ್ದ ಸಭೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಣ ತಜ್ಞ, ಸಮಾಜ ಸೇವಕ ಚಿಕ್ಕಮೇಗಳಗೆರೆಯ ಡಾ. ಜಯಣ್ಣ ಕಂಚಿಕೆರೆ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.


**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಬಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 40×60, South, 80 ಅಡಿ, ರೋಡಿಗಿದೆ. 40×60 East, 30×40, 30×40 East ಅಕ್ಕ ಪಕ್ಕ , 30×50 West, 40 ಅಡಿ ರೋಡಿಗಿದೆ. Rate 1800 Sqft
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 40x60 ದಕ್ಷಿಣ, ಹೈಟೆಕ್ ಹಾಸ್ಪಿಟಲ್ ರಸ್ತೆ ಸಾಯಿಬಾಬಾ ದೇವಸ್ಥಾನದ ಹಿಂಭಾಗ 30x50 ಪೂರ್ವ, ಶಿವ-ಪಾರ್ವತಿ ಬಡಾವಣೆಯಲ್ಲಿ 40x60 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಕ್ಕ ಹೊಸ ಬನಶಂಕರಿ ಬನಶಂಕರಿ ಬಡಾವಣೆಯಲ್ಲಿ 30x25 ಉತ್ತರ ಅಕ್ಕ-ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ, 40x60 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ :
90367-34919

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಕನ್ನಡ ಬೋಧಿಸುವ B.A, B.Ed, MA, B.Ed ತರಬೇತಿ ಪಡೆದ ಶಿಕ್ಷಕರು ಬೇಕಾಗಿದ್ದಾರೆ. ದೈಹಿಕ ಶಿಕ್ಷಕರೂ ಸಂಪರ್ಕಿಸಬಹುದು
ನಂದಗೋಕುಲ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆ
ಆರ್.ಟಿ.ಓ. ಆಫೀಸ್ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ. ಮೊ. 99640-17729

**ಬೇಕಾಗಿದ್ದಾರೆ**
ಸೆಕೆಂಡ್ ಕ್ಲಾಸ್ ಬಾಯ್ಲರ್ ಆಪರೇಟರ್ ಬೇಕಾಗಿದ್ದಾರೆ. ಸರ್ಟಿಫಿಕೇಟ್ ಇದ್ದವರಿಗೆ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ :
V A ಆಗ್ರೋ ಫುಡ್ಸ್ ದಾವಣಗೆರೆ.
98455 45573

**3 BHK ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರದ ಕೊನೆಯ ಬಸ್ ಸ್ಟಾಪ್ ಬಳಿ ಇರುವ ಅಪಾರ್ಟ್‌ಮೆಂಟ್‌ನಲ್ಲಿ.
95913 60143

**ಮನೆ ಬಾಡಿಗೆಗೆ ಇದೆ**
ಜಯನಗರದಲ್ಲಿ ಸಾಯಿ ದೇವಸ್ಥಾನ ಹಿಂಭಾಗ ಕೆಳಗಿನ ಮನೆ (ನೆಲ ಮಹಡಿ) ಡಬಲ್ ಬೆಡ್ ರೂಮ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
97311 60922 80730 12526
(ಸಸ್ಯಹಾರಿಗಳಿಗೆ ಮಾತ್ರ)

**ಬೇಕಾಗಿದ್ದಾರೆ**
ದಾವಣಗೆರೆಯ ವಿದ್ಯಾನಗರದಲ್ಲಿರುವ ಕಚೇರಿಯೊಂದಕ್ಕೆ ಸಹಾಯಕರೊಬ್ಬರು ಬೇಕಾಗಿದ್ದಾರೆ. ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂವಹನ ನಡೆಸುವ & ಕಂಪ್ಯೂಟರ್ ಜ್ಞಾನ ಅಗತ್ಯ, ನಿಮ್ಮ ಬಯೋಡಾಟಾ ಕಳುಹಿಸಿ :
directorpaeltd@gmail.com
99804 38600

**ಸಿಂಗಲ್ ಬೆಡ್ ರೂಂ ಮನೆ ಲೀಸ್‌ಗೆ ಇದೆ**
1ನೇ ಮಹಡಿ, 1ನೇ ಮೇನ್, 3ನೇ ಕ್ರಾಸ್, ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ.
76768 55957

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**2BHK ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಲೇಔಟ್ "ಬಿ" ಬ್ಲಾಕ್ 4ನೇ ಮೇನ್, 12ನೇ ಕ್ರಾಸ್‌ನಲ್ಲಿ ಡೋ.ನಂ, 3425/4 ಪ್ರಭಾ ವೆಂಕಟೇಶ್ ಮ್ಯಾನ್ಷನ್ ಮೊದಲನೆ ಅಂತಸ್ತಿನಲ್ಲಿ, ಉತ್ತರ ದಿಕ್ಕಿನ, ಕಾರ್ಪೊರೇಷನ್ ಮತ್ತು ಬೋರ್ ನೀರಿನ ಸೌಕರ್ಯ, ಪಾರ್ಕಿಂಗ್ ಸೌಲಭ್ಯವಿದೆ.
90363 51267

**WORK FROM HOME**
Male/Female, Full / Part time Hand writing work. Small Letter to Capital Letter Earn Per month 12,000/- to 15,000/-
89718 52431

**ಬೇಕಾಗಿದ್ದಾರೆ**
ಸೇಲ್ಸ್ ಎಕ್ಸಿಕ್ಯೂಟಿವ್, ಡೆಲಿವರಿ ಬಾಯ್ಸ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
2nd Main College Road, P.J Extinction Beside Near IDBI Bank, Davangere Beside Alur Chandrasheker Hospital Davangere.
99160 67627

**ಸ್ಕೂಟರ್ ಖರೀದಿಗೆ ಬೇಕಾಗಿದೆ**
Honda Active, Axiss Suzki 125, Vespa 2014 ರಿಂದ 16ರ ವರೆಗಿನ ಮಾಡೆಲ್ ಇರುವ, ಸ್ವಂತ ಮಾಲೀಕರು ತಮ್ಮ ಗಾಡಿ ಮಾರಾಟ ಮಾಡುವುದಿದ್ದರೆ ಸಂಪರ್ಕಿಸಿ:
ಕಿಶನ್ ಪಟೇಲ್: 94492 54646
ಸುನಿಲ್ ಕುಮಾರ್: 91481 89865

**ವಧು ಬೇಕಾಗಿದೆ**
ವಿಷಯಕ್ಕೆ ಸಂಬಧಿಸಿದಂತೆ ಪದವೀಧರ ಲಿಂಗಾಯತ ವಿಧುರ ವರನಿಗೆ ಲಿಂಗಾಯತ ವಧು ಬೇಕಾಗಿದೆ, ಸಾಮಾನ್ಯ ಅಥವಾ ವಿಧವೆ, ವಿಚ್ಛೇದಿತೆ ಇರಲಿ, ಉತ್ತಮ ಗುಣವಂತೆ ಆಗಿರಬೇಕು ಆಸಕ್ತಿ ಇರುವವರು ಕರೆಮಾಡಿ.
ಮೊ :63610 82838, 93539 28638

**ಸೂರ್ಯ ನವೋದಯ**
(4ನೇ ಮತ್ತು 5ನೇ ತರಗತಿ ಮಕ್ಕಳಿಗೆ) ಅಡ್ಮಿಷನ್ ಪ್ರಾರಂಭ :1.6.2022 ರಿಂದ. ತರಗತಿಗಳು ಪ್ರಾರಂಭ: 22.6.2022
ಸ್ಥಳ: K.S.S ಕಾಲೇಜು ಸರಸ್ವತಿ ಬಡಾವಣೆ ದಾವಣಗೆರೆ.
ಸಮಯ: ಬೆಳಿಗ್ಗೆ 6-15 ರಿಂದ 7-45
ಸ್ಥಳ: ಕಾಮ್ರೇಡ್ ಲೆನಿನ್ ಶಾಲೆ ಡಾಂಗೇ ಪಾರ್ಕ್ ಹತ್ತಿರ, ದಾವಣಗೆರೆ.
ಸಮಯ: ಸಂಜೆ. 5-15 ರಿಂದ 6-45
ಶ್ರೀ ಸುರೇಶ ಪಿ. ಮುರಗಿ M.Sc, B.Ed
99028 24909, 98447 48763

**2BHK ಮನೆ ಬಾಡಿಗೆಗಿದೆ**
1ನೇ ಮಹಡಿ, #2923/530, 3ನೇ ಕ್ರಾಸ್, 3ನೇ ಎ ಮೇನ್ ರೋಡ್, ನೇತಾಜಿ ಇನ್‌ಡೋರ್ ಸ್ಟೇಡಿಯಂ ಹಿಂದೆ, ಎಸ್.ಎಸ್. ಲೇಔಟ್, ಬಿ ಬ್ಲಾಕ್, ದಾವಣಗೆರೆ.
94484 90099

**ಸುವರ್ಣ ಉದ್ಯೋಗಾವಕಾಶ**
ಪ್ರತಿ ತಿಂಗಳು 1 ಲಕ್ಷದವರೆಗೆ ಸಂಭಾವನೆ ನಿರುದ್ಯೋಗಿ ಯುವಕ, ಯುವತಿಯರು, ನಿವೃತ್ತರು, ವಿಮಾಪ್ರತಿನಿಧಿಗಳು, ಗೃಹಿಣಿಯರು, ಅಂಗವಿಕಲರು ಆಸಕ್ತಿಯುಳ್ಳ ಪ್ರತಿಯೊಬ್ಬರಿಗು ಸುವರ್ಣಅವಕಾಶ. ಸಂಪರ್ಕಿಸಿ.
ಸಾಯಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ.
99802 40407, 86606 69218

**ಬೇಕಾಗಿದ್ದಾರೆ**
ಟೈಲರಿಂಗ್‌ಗೆ ಮಹಿಳೆಯರು 10 ಜನ, ಸಹಾಯಕಿಯರು ಮಹಿಳೆಯರು 10 ಜನ ಕೆಲಸಕ್ಕೆ ತುರ್ತು ಬೇಕಾಗಿದ್ದಾರೆ.
ಮೊ : 88614 38237

**ಕೆಲಸಕ್ಕೆ ಬೇಕಾಗಿದ್ದಾರೆ**
ವೇಟರ್ ಕೆಲಸಕ್ಕೆ ಅನುಭವ ಇರುವ ಕೆಲಸಗಾರರು ಬೇಕಾಗಿದ್ದಾರೆ.
Hotel Sensation ಶಾಮನೂರು ಬ್ರಿಡ್ಜ್ ಹತ್ತಿರ ಸರ್ವಿಸ್ ರಸ್ತೆ, ದಾವಣಗೆರೆ.
Khan : 98868 53782
Vijaykumar : 98864 74428

**ಪಿತ್ರಾರ್ಜಿತ/ ಕುಟುಂಬದ ಆಸ್ತಿ**
ನಿಮ್ಮ ಕುಟುಂಬದ ಪೂರ್ವಜರ ಮತ್ತು ಒಟ್ಟು ಕುಟುಂಬದ ಆಸ್ತಿಗಳಿಂದ ನಿಮಗೆ ಬರಬೇಕಾಗಿರತಕ್ಕ ಪಾಲಿನ ಭಾಗ ಪಡೆಯಲು ಸಂಪರ್ಕಿಸಿರಿ.
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಬೇಕಾಗಿದ್ದಾರೆ**
B.Sc, B.Ed, (PCM) ವಿದ್ಯಾರ್ಹತೆ ಹೊಂದಿರುವ ಮತ್ತು JOC / VTC ವಿದ್ಯಾರ್ಹತೆ ಹೊಂದಿರುವ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
08192-255433, 91106 79096

**House For Lease**
60x40 area, 3BHK, with Car Parking, Ground Floor. Shivkumar Swami Nagar, 2nd stage, Near blue dart coriear, Hadadi road, Davangere.
Ph: 94488 24114

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಪುರಮಠ ಹಾಸ್ಟಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸ್ಟೂಡೆಂಟ್ ಮೆಸ್ ಇದೆ**
ನಮಗೆ ಹೆಣ್ಣು ಮಕ್ಕಳು ಕೆಲಸಗಾರರು ಬೇಕಾಗಿದ್ದಾರೆ. ಚಪಾತಿ, ರೊಟ್ಟಿ, ಹೋಳಿಗೆ ಮಾಡುವವರು ಬೇಕಾಗಿದ್ದಾರೆ. ನಮ್ಮಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಇದೆ.
73497 26169

**ಅಕೌಂಟೆಂಟ್ ಬೇಕಾಗಿದ್ದಾರೆ**
ಮಲೇಬೆನ್ನೂರು ಪಟ್ಟಣದ ಶ್ರೀ ಚನ್ನೇಶ್ವರ ರೈಸ್ ಇಂಡಸ್ಟ್ರೀಸ್‌ನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡಲು ಕ್ಯಾಶ್ ಬುಕ್, ಬಿಲ್ಲಿಂಗ್, ಟ್ಯಾಲಿ, ಡಾಟಾ ಎಂಟ್ರಿ ಜ್ಞಾನ ಇರುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
99011 22854

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಬನಶಂಕರಿ ಬಡಾವಣೆಯಲ್ಲಿ 30x50, 30x60, 30x46, 40x50, 30x55 ಇನ್ನೂ ಇತರೆ ಅಳತೆಯ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
97432 09680

**ಬಾಡಿಗೆಗೆ ಇವೆ**
3 ಗೋಡೌನ್‌ಗಳು ವಿಸ್ತೀರ್ಣ, 5033, 8100, 6847 ಚದರ ಅಡಿಗಳು, 2 ಶೆಡ್‌ಗಳು 4200, 2520 ಚದುರ ಅಡಿಯುಳ್ಳ ಗೋಡೌನ್ ಹಾಗೂ ಶೆಡ್‌ಗಳು ಬಾಡಿಗೆಗೆ ಇವೆ. ಸಂಪರ್ಕಿಸಿ:
94822 41415, 78139 54977

**ಮನೆ ಬಾಡಿಗೆಗೆ ಇದೆ**
ಸ್ಥಳ: ಯರಗುಂಟೆ ಗಣೇಶ್ ರಾವ್ ಲೇಔಟ್
ಸಂಪರ್ಕಿಸಿ:
91649 22567
85535 15361

**S.K Suppliers**
ಉತ್ತಮವಾದ ಮರುಳು, ಜಲ್ಲಿ ಮತ್ತು ಎಮ್ ಸ್ಯಾಂಡ್ ದೊರೆಯುತ್ತದೆ. ಸಂಪರ್ಕಿಸಿ :
Krishna
81058 49150, 88677 71135

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**ಬ್ಯೂಟಿಷಿಯನ್ ಬೇಕಾಗಿದ್ದಾರೆ**
ನುರಿತ ಜ್ಞಾನವುಳ್ಳ Beutician ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಬೆಳಿಗ್ಗೆ 10 ರಿಂದ 8 ಗಂಟೆವರೆಗೆ
Contact :
81974 43214, 99457 37214

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ತಕ್ಷಣ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳವರು ಹುಡುಗರು ಮತ್ತು ಮಹಿಳೆಯರು Day & Night Shift ಪೆಟ್ರೋಲ್ & ಡೀಸೆಲ್ ಹಾಕುವವರು ಬೇಕಾಗಿದ್ದಾರೆ.
ಸಂಪರ್ಕಿಸಿ :
94821 09492, 94807 77338

**ಬೇಕಾಗಿದ್ದಾರೆ**
ನಾರ್ಥ್ ಇಂಡಿಯಾನ್ ವೆಜ್ ರೆಸ್ಟೋರೆಂಟ್‌ಗೆ ವೈಟರ್ ಮತ್ತು ಕ್ಯಾಪ್ಟನ್ ಬೇಕಾಗಿದ್ದಾರೆ. ಸಂಪರ್ಕಿಸಿ
81052 30144

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

## ಬಾಸ್ಕೆಟ್‌ಬಾಲ್ ಪಂದ್ಯಾವಳಿ ಉದ್ಘಾಟನೆ



ದಾವಣಗೆರೆ, ಜೂ. 16- ಜೆಜೆ.ಎಂ. ಮಹಾವಿದ್ಯಾಲಯದಲ್ಲಿ ಈಚೆಗೆ ಐದು ದಿನಗಳ ಕಾಲ ರಾಜ್ಯಮಟ್ಟದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ರಾಜ್ಯಮಟ್ಟದ ಬಾಸ್ಕೆಟ್‌ಬಾಲ್ ಪಂದ್ಯಾವಳಿಯ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಗಳಾಗಿ ಬಾಸ್ಕೆಟ್‌ಬಾಲ್ ತರಬೇತುದಾರ ಸತ್ಯನ್, ಬಾಪೂಜಿ ಶಿಶು ಆಸ್ಪತ್ರೆಯ ವೈದ್ಯರಾದ ಡಾ. ಮೂಗನಗೌಡ ಪಾಟೀಲ, ದಯಾನಂದ ಸಾಗರ್ ಕಾಲೇಜಿನ ದೈಹಿಕ ನಿರ್ದೇಶಕ ನಂಜುಂಡಸ್ವಾಮಿ, ಬಾಪೂಜಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಕುಮಾರ್ ಉಪಸ್ಥಿತರಿದ್ದರು.

ರಾಜ್ಯದ ವಿವಿಧ ಭಾಗಗಳಿಂದ 40 ಪುರುಷರ ಹಾಗೂ 28 ಮಹಿಳೆಯರ ತಂಡಗಳು ಭಾಗಿಯಾಗಿವೆ. ಜಿಲ್ಲಾ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ಹಾಗೂ ಎಸ್ ಎಸ್ ಹೈಟೆಕ್ ಕಾಲೇಜಿನ ಅಂಕಣದಲ್ಲಿ ಪಂದ್ಯಗಳು ನಡೆಯುತ್ತಿವೆ. ವಿಶ್ವ ರಕ್ತದಾನಿಗಳ ದಿನಾಚರಣೆ ಪ್ರಯುಕ್ತ 150 ಬಾರಿ ರಕ್ತದಾನ ಮಾಡಿದ ಆದಿಕೇಶವ ಪ್ರಕಾಶ್, 21 ಬಾರಿ ರಕ್ತದಾನ ಮಾಡಿದ ಜಜಮು ಕಾಲೇಜಿನ ಡಾ. ದೀಕ್ಷಾ, ತರಬೇತುದಾರ ಸತ್ಯನ್, ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಪರಿವೀಕ್ಷಕ ನಂಜುಂಡಸ್ವಾಮಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಗೋಪಾಲಕೃಷ್ಣ ಸ್ವಾಗತಿಸಿದರು.

## ಬಡ್ಡಿ ದರ ಏರಿಕೆ : ಆರ್ಥಿಕ ಹಿಂಜರಿತದತ್ತ ಅಮೆರಿಕ

ವಾಷಿಂಗ್ಟನ್, ಜೂ. 16 – ಅಮೆರಿಕದ ಕೇಂದ್ರ ಬ್ಯಾಂಕ್ ಬಡ್ಡಿ ದರಗಳನ್ನು ಶೇ.0.75ರಷ್ಟು ಹೆಚ್ಚಿಸಿದೆ. ನಾಲ್ಕು ದಶಕಗಳಲ್ಲಿಯೇ ಅತಿ ಹೆಚ್ಚಿನ ಹಣದುಬ್ಬರ ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಆದರೆ, ಬಡ್ಡಿ ದರ ತೀವ್ರ ಏರಿಕೆ ಮಾಡಿರುವ ಹಿನ್ನೆಲೆಯಲ್ಲಿ, ಆರ್ಥಿಕ ಹಿಂಜರಿತ ಉಂಟಾಗುವ ಅಪಾಯ ಎದುರಾಗಿದೆ.

ಅಮೆರಿಕದಲ್ಲಿ 1981ರ ನಂತರ ಇದೇ ಮೊದಲ ಬಾರಿಗೆ ಶೇ.8.6ರ ಭಾರೀ ಹಣದುಬ್ಬರ ಪರಿಸ್ಥಿತಿ ಉಂಟಾಗಿದೆ. ಈ ಕಾರಣಕ್ಕಾಗಿ ಕೇಂದ್ರ ಬ್ಯಾಂಕ್ ಶೇ.0.5ರ ಬಡ್ಡಿ ದರ ಏರಿಕೆ ಮಾಡಲಿದೆ ಎಂಬ ನಿರೀಕ್ಷೆ ಇತ್ತು. ಆದರೆ, ಬಡ್ಡಿ ದರ ಹೆಚ್ಚಳ ನಿರೀಕ್ಷೆಗಿಂತ ಹೆಚ್ಚಾಗಿದೆ. 1994ರ ನಂತರ ಇದೇ ಮೊದಲ ಬಾರಿಗೆ ಈ ಪ್ರಮಾಣದಲ್ಲಿ ಬಡ್ಡಿ ದರ ಏರಿಕೆ ಮಾಡಲಾಗಿದೆ.

ಬಡ್ಡಿ ದರ ಹೆಚ್ಚಿಸಿರುವುದರಿಂದ ಸಾಲಗಾರರ ಮೇಲಿನ ಹೊರೆ ಹೆಚ್ಚಾಗಲಿದೆ. ಇದು ಜನರು ಖರೀದಿಸುವ ಶಕ್ತಿಯನ್ನು ಕಡಿಮೆ ಮಾಡಲಿದೆ.

ಕೇಂದ್ರ ಬ್ಯಾಂಕ್ ಕ್ರಮದಿಂದಾಗಿ ಆರ್ಥಿಕ ಹಿಂಜರಿತದ ಅಪಾಯ ಹೆಚ್ಚಾಗಿದೆ. ಹಿಂಜರಿತ ತಪ್ಪಿಸುವುದು ಕಷ್ಟದಾಯಕ ಎಂದು ಆರ್ಥಿಕ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಸಕ್ತ ವರ್ಷ ಅಮೆರಿಕದ ಬೆಳವಣಿಗೆ ದರ ಶೇ.1.7 ಆಗಿರಲಿದೆ ಎಂದು ಕೇಂದ್ರ ಬ್ಯಾಂಕ್ ಅಂದಾಜಿಸಿದೆ. ಈ ಹಿಂದೆ ಮಾರ್ಚ್ ತಿಂಗಳಲ್ಲಿ ಶೇ.2.8ರ ಗುರಿ ಹೊಂದಲಾಗಿತ್ತು. 1955ರ ನಂತರ ಪ್ರತಿ ಬಾರಿ ಹಣದುಬ್ಬರ ಶೇ.4ಕ್ಕಿಂತ ಹೆಚ್ಚಾದ ಹಾಗೂ ನಿರುದ್ಯೋಗ ದರ ಶೇ.5ಕ್ಕಿಂತ ಕಡಿಮೆಯಾದ ಎರಡೇ ವರ್ಷಗಳಲ್ಲಿ ಆರ್ಥಿಕ ಹಿಂಜರಿತ ಉಂಟಾಗಿದೆ. ಪ್ರಸಕ್ತ ಅಮೆರಿಕದ ನಿರುದ್ಯೋಗ ದರ ಶೇ.3.6 ಹಾಗೂ ಹಣದುಬ್ಬರ ಮಾರ್ಚ್ ನಂತರ ನಿರಂತರವಾಗಿ ಶೇ.8ಕ್ಕಿಂತ ಹೆಚ್ಚಾಗಿದೆ.

ಕೊರೊನಾ ನಂತರ ಅಮೆರಿಕದ ಆರ್ಥಿಕ ವ್ಯವಸ್ಥೆ ಅನಿರೀಕ್ಷಿತ ಚೇತರಿಕೆ ಕಂಡಿತ್ತು. ಇದರಿಂದಾಗಿ ಸರಕುಗಳ ಬೇಡಿಕೆ ಹೆಚ್ಚಾಗಿ, ಪೂರೈಕೆಯ ಸಮಸ್ಯೆಯಾಗಿತ್ತು.

ಈ ನಡುವೆಯೇ, ಅಮೆರಿಕದ ಅಧ್ಯಕ್ಷ ಜೋ ಬಿಡೆನ್ 1.9 ಟ್ರಿಲಿಯನ್ ಡಾಲರ್‌ಗಳ ಉತ್ತೇಜನ ಯೋಜನೆಯನ್ನು ಪ್ರಕಟಿಸಿದ್ದರು. ಕೇಂದ್ರ ಬ್ಯಾಂಕ್ ಸುಲಭ ಸಾಲ ನೀತಿಯನ್ನು ಮುಂದುವರೆಸಿತ್ತು. ಇದರಿಂದಾಗಿ ಆರ್ಥಿಕತೆಯಲ್ಲಿ ಹಣದ ಹರಿವು ಅತಿ ಹೆಚ್ಚಾಗಿ ಸಮಸ್ಯೆ ಉಲ್ಬಣಿಸಿದೆ.

ಪ್ರಸಕ್ತ ಸರ್ಕಾರದ ನೆರವು ಯೋಜನೆ ಮುಕ್ತಾಯವಾಗಿದೆ. ದೇಶದ ಜನರ ಉಳಿತಾಯ ಪ್ರಮಾಣ ಕೊರೊನಾಗೆ ಮುಂಚಿನ ದಿನಗಳ ಮಟ್ಟಕ್ಕೆ ಇಳಿಕೆಯಾಗಿದೆ. ಹಣದುಬ್ಬರ ಭುಗಿಲೆದ್ದ ಕಾರಣ ಜನರ ಖರೀದಿ ಶಕ್ತಿ ಕಡಿಮೆಯಾಗಿದೆ. ಡಿಸೆಂಬರ್ ನಂತರ ಮೊದಲ ಬಾರಿಗೆ ಮೇ ತಿಂಗಳಲ್ಲಿ ಚಿಲ್ಲರೆ ಮಾರಾಟ ಶೇ.0.3ರಷ್ಟು ಕುಸಿದಿದೆ.

## ಬಡತನ ಸಾಧನೆಗೆ ಅಡ್ಡಿಯಲ್ಲ, ದೃಢ ನಿರ್ಧಾರಬೇಕು





ದಾವಣಗೆರೆ, ಜೂ. 16 – ಸಾಧನೆಗೆ ಶ್ರೀಮಂತಿಕೆ, ಇಲ್ಲವೇ ಬಂಡವಾಳ ಬೇಕಿಲ್ಲ. ದೃಢ ನಿರ್ಧಾರ ಹಾಗೂ ಸಕಾರಾತ್ಮಕ ಮನೋಭಾವ ಹೊಂದಿದವರಿಂದ ಮಾತ್ರ ಸಾಧನೆ ಸಾಧ್ಯ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

**ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಅಭಿಮತ**

ನಗರದ ಬಸವ ಕೇಂದ್ರ - ವಿರಕ್ತ ಮಠದ ವತಿಯಿಂದ ವಿರಕ್ತ ಮಠದಲ್ಲಿ ನಿನ್ನೆ ಏರ್ಪಾಡಾಗಿದ್ದ ವಿಜ್ಞಾನಿ ಡಾ. ರೇವಣಸಿದ್ದ, ಎಂ.ಎಸ್ಸಿಯಲ್ಲಿ ಬಂಗಾರದ ಪದಕ ಪಡೆದ ಎಂ.ಆರ್. ರಂಜಿತ ಹಾಗೂ ಪವರ್ ಲಿಫ್ಟಿಂಗ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವ ಎಸ್.ಜೆ.ಎಂ. ಕಾಲೇಜಿನ ವಿದ್ಯಾರ್ಥಿ ವಿನಯ್ ಗೊಲ್ಲರ್ ಅವರುಗಳನ್ನು ಸನ್ಮಾನಿಸುವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಬಡತನದಿಂದ ಬಂದು ಸಾಧನೆ ಮಾಡಿದ ಬಹಳಷ್ಟು ಜನರಿದ್ದಾರೆ. ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಇಂತಹ ಸಾಧಕರಲ್ಲಿ ಒಬ್ಬರು. ಬಡವರಾದರೂ ಸಾಧನೆಯಲ್ಲಿ ಶ್ರೀಮಂತರಾಗುವ ಬದ್ಧತೆ ಹೊಂದಬೇಕು ಎಂದವರು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕೇಂದ್ರ ಕೃಷಿ ಸಚಿವಾಲಯದ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ವಿಜ್ಞಾನಿ ಡಾ. ರೇವಣಸಿದ್ದ, ಶೇ.83 ರಷ್ಟು ವಿದ್ಯಾರ್ಥಿಗಳು ಶಿಕ್ಷಕರ ಬಳಿ ಪ್ರಶ್ನೆ ಕೇಳಲು ಹಿಂಜರಿಯುತ್ತಾರೆ. ಇದರಿಂದಾಗಿ ಅವರ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗುತ್ತದೆ. ಮುಕ್ತವಾಗಿ ಪ್ರಶ್ನೆ ಕೇಳುವುದರಿಂದ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರೂ ಹೆಚ್ಚು ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಇನ್ನೋರ್ವ ಸನ್ಮಾನಿತರಾದ ತಿರುಪತಿಯ ಎಂ.ಆರ್. ಆಚಾರ್ಯ, ರಂಗ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಎಂ.ಎಸ್ಸಿಯಲ್ಲಿ ಚಿನ್ನದ ಪದಕ ವಿಜೇತೆ ಎಂ.ಆರ್. ರಂಜಿತ ಮಾತನಾಡಿ, ಸಮಯವನ್ನು ನಾವು ಗೌರವಿಸಿದರೆ ಸಮಯ ನಮ್ಮನ್ನು ಗೌರವಿಸುತ್ತದೆ. ಶಿಸ್ತಿನಿಂದ ಕಾರ್ಯ ನಿರ್ವಹಿಸುವ ಜೊತೆಗೆ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ ಮಾತನಾಡಿ, ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯ ಜೊತೆಗೆ ಅಂತರಂಗ ಬೆಳೆಸುವ ಪ್ರಜ್ಞಾವಂತಿಕೆಯ ಪಠ್ಯದ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುವ ಎಸ್.ಜೆ.ಎಂ. ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿ ವಿನಯ್ ಗೊಲ್ಲರ್ ಅವರನ್ನು ಸನ್ಮಾನಿಸಲಾಯಿತು.

ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಪರಮೇಶ್ವರಪ್ಪ ಮತ್ತು ಎಸ್.ಜೆ.ಎಂ. ಕಾಲೇಜಿನ ಪ್ರಾಂಶುಪಾಲ ರೋಷನ್ ಉಪಸ್ಥಿತರಿದ್ದರು.

## 26ರಂದು ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲೆಯ ಎಲ್ಲಾ ತಾಲ್ಲೂಕು ಘಟಕಗಳಿಗೆ ಚುನಾವಣೆ

ದಾವಣಗೆರೆ, ಜೂ.16- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಘಟಕಗಳ ಪದಾಧಿಕಾರಿಗಳ ಆಯ್ಕೆಗೆ ಇದೇ ದಿನಾಂಕ 26ರಂದು ಚುನಾವಣೆ ನಡೆಯಲಿದೆ.

ಚುನಾವಣಾ ಪ್ರಕ್ರಿಯೆಯು ನಿನ್ನೆ ಆರಂಭಗೊಂಡಿದ್ದು, ನಾಡಿದ್ದು ದಿನಾಂಕ 17ರಂದು ಉಮೇದುವಾರಿಕೆ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ದಿನಾಂಕ 18ರಂದು ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿದ್ದು, ಇದೇ ದಿನಾಂಕ 26ರ ಭಾನುವಾರ ಚುನಾವಣೆ ಜರುಗಲಿದೆ. ಅದೇ ದಿನ ಮಧ್ಯಾಹ್ನ ಮತ ಎಣಿಕೆ ಕಾರ್ಯ ನಡೆದು, ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ಹೋಟೆಲ್ ಅಪೂರ್ವ ಸಭಾಂಗಣದಲ್ಲಿ ಮೊನ್ನೆ ನಡೆದ ಸಂಘದ ಜಿಲ್ಲಾ ಸಮಿತಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಚುನಾವಣೆ ನಡೆಸಲು ತೀರ್ಮಾನಿಸಲಾಯಿತು.

ಸಂಘದ ರಾಜ್ಯ ಘಟಕದ ನಿರ್ದೇಶನದ ಮೇರೆಗೆ ಈ ಚುನಾವಣಾ ಪ್ರಕ್ರಿಯೆ ಆರಂಭಿಸಲಾಗಿದ್ದು, ಸಂಘದ ಜಿಲ್ಲಾ ಘಟಕದಿಂದ ಇಬ್ಬರಂತೆ ಎಲ್ಲಾ ತಾಲ್ಲೂಕುಗಳಿಗೆ ಚುನಾವಣಾಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶಿಸಲಾಯಿತು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ತಿಳಿಸಿದ್ದಾರೆ.

ಹರಿಹರ ತಾಲ್ಲೂಕಿನ ಚುನಾವಣಾಧಿಕಾರಿಗಳಾಗಿ ಎನ್.ಆರ್. ರವಿ, ಜೆ.ಎಸ್. ವೀರೇಶ್, ಹೊನ್ನಾಳಿ ತಾಲ್ಲೂಕಿಗೆ ಆರ್.ಎಸ್. ತಿಪ್ಪೇಸ್ವಾಮಿ, ಬಿ.ಎಸ್. ಮುದ್ದಯ್ಯ, ಚನ್ನಗಿರಿ ತಾಲ್ಲೂಕಿಗೆ ಸಿ. ವೇದಮೂರ್ತಿ, ಎನ್.ಎಂ. ಇಂದೂಶೇಖರ್ ನಿಶಾನಿಮಠ, ಜಗಳೂರು ತಾಲ್ಲೂಕಿಗೆ ಬಿ. ಚನ್ನವೀರಯ್ಯ, ಹೆಚ್. ಚಂದ್ರಶೇಖರ್‌ಚುನಾವಣಾಧಿಕಾರಿಗಳಾಗಿನೇಮಕಗೊಂಡಿದ್ದಾರೆ ಎಂದು ಫಕೃದ್ದೀನ್ ವಿವರಿಸಿದ್ದಾರೆ.

ಚುನಾವಣೆಯು ಆಯಾ ತಾಲ್ಲೂಕು ಕೇಂದ್ರದ ಪತ್ರಿಕಾ ಭವನದಲ್ಲಿ ನಡೆಯಲಿದೆ. ಸಂಘದ ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಕೊಟ್ರೇಶ್ ಅಣಬೂರು ಮಠ ಸಭೆಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಸಂಘದ ಖಜಾಂಚಿ ಎನ್.ವಿ. ಬದರಿನಾಥ್ ಸ್ವಾಗತಿಸಿ, ವಂದಿಸಿದರು.

## ದೊಡ್ಡಬಾತಿ ಗ್ರಾ.ಪಂ. ಅಧ್ಯಕ್ಷರಾಗಿ ವೀರೇಶ್ ದೊಗ್ಗಳ್ಳಿ : ಅಭಿನಂದನೆ



ದಾವಣಗೆರೆ, ಜೂ. 16- ದೊಡ್ಡಬಾತಿ ಗ್ರಾ.ಪಂ. ಅಧ್ಯಕ್ಷರಾಗಿ ಆಯ್ಕೆಯಾಗಿರುವ ವೀರೇಶ್ ದೊಗ್ಗಳ್ಳಿ ಅವರನ್ನು ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧನಂಜಯ, ಬಿಜೆಪಿ ಉತ್ತರ ಮಂಡಲದ ಉಪಾಧ್ಯಕ್ಷರಾದ ಹಳೇಬಾತಿ ಸಿದ್ದೇಶ್, ಬಿಜೆಪಿಯ ಯುವ ಮೋರ್ಚಾ ಸದಸ್ಯರಾದ ಶಂಕರಮೂರ್ತಿ, ಅಶೋಕ್, ಸುರೇಶ್, ಪ್ರಕಾಶ್, ಸಂಜು, ನವೀನ್, ಹೇಮಂತ್, ಹರೀಶ್, ಹನುಮಂತ, ಶಿವರಾಜ್, ಚೇತನ್, ಮಹಾದೇವ ಮತ್ತು ಇತರರು ಅಭಿನಂದಿಸಿದ್ದಾರೆ.

## ನಗರದಲ್ಲಿಂದು ಕಾಂಗ್ರೆಸ್ ಪ್ರತಿಭಟನೆ

ಎಐಸಿಸಿ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರಿಗೆ ಕೇಂದ್ರ ಬಿಜೆಪಿ ಸರ್ಕಾರ ರಾಜಕೀಯ ದುರುದ್ದೇಶದಿಂದ ಕೈಗೊಳ್ಳುತ್ತಿರುವ ಕ್ರಮವನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಇಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಂಜಪ್ಪ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದೆ.

ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಂತರ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ ನಂತರ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ರಾಷ್ಟ್ರಪತಿಗಳಿಗೆ ಮನವಿಪತ್ರ ಸಲ್ಲಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಗ್ರಾಹಕರ ಸಂವಾದ

ದಾವಣಗೆರೆ, ಜೂ.16- ಬೆಸ್ಕಾಂ ನಗರ ಉಪ ವಿಭಾಗ-1 ರ ವತಿಯಿಂದ ನಾಡಿದ್ದು ದಿನಾಂಕ 18ರ ಶನಿವಾರ ಮಧ್ಯಾಹ್ನ 3 ರಿಂದ 5.30 ರವರೆಗೆ ಗ್ರಾಹಕರ ಸಂವಾದ ನಡೆಯಲಿದ್ದು, ನಗರ ಉಪ ವಿಭಾಗ-1 ರ ವ್ಯಾಪ್ತಿಗೆ ಬರುವ ಗ್ರಾಹಕರು ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಮಧ್ಯಾಹ್ನ 3 ಗಂಟೆಗೆ ವಿದ್ಯಾನಗರದ ರವಿಂದ್ರನಾಥ ಪಾರ್ಕ್‌ನಲ್ಲಿ ಹಾಜರಾಗಬೇಕಾಗಿ ಕೋರಲಾಗಿದೆ.

### ಓದುಗರ ಪತ್ರ

## ಪರಿಸರ ದಿನಾಚರಣೆಗೆ ನಿಜವಾದ ಅರ್ಥ ಬರುವುದು ಹೀಗೆ..!



**ಮಾನ್ಯರೇ,**

ಜೂನ್ ತಿಂಗಳ 5ರಂದು ನಾವು ಪರಿಸರ ದಿನಾಚರಣೆಯನ್ನು ಆಚರಿಸುತ್ತೇವೆ. ಇದು ಒಂದೇ ದಿನದ ಮಟ್ಟಿಗೆ ಇರಬಾರದು. ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛತೆಯಿಂದ ಇರಿಸಿಕೊಳ್ಳಲು ಶ್ರಮಿಸಬೇಕು. ಆಗ ಮಾತ್ರ ನಗರವು ಸ್ವಚ್ಛತೆಯಿಂದ ಕೂಡಿ, ಉತ್ತಮವಾದ ಪರಿಸರ ನಿರ್ಮಾಣವಾಗುವುದು.

ಮಹಾನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ಮರಕ್ಕೆ ಬಿದಿರಿನ ಬುಟ್ಟಿಯನ್ನು ಕಟ್ಟಲಾಗಿದೆ. ಒಣ ಎಲೆಗಳು, ಕಾಗದದ ಚೂರುಗಳನ್ನು ಇದಕ್ಕೆ ಹಾಕುವ ವ್ಯವಸ್ಥೆಯನ್ನು ಮಹಾನಗರ ಪಾಲಿಕೆ ಮಾಡಿದೆ.

ಈ ರೀತಿಯೇ ಗುಟ್ಕಾ ಮಾರಾಟ ಮಾಡುವ ಅಂಗಡಿಗಳು ಇದೇ ರೀತಿ ಬುಟ್ಟಿ ಅಥವಾ ಡಬ್ಬಿಗಳನ್ನು ಇರಿಸಲು ಆದೇಶವನ್ನು ಮಾಡಬೇಕಿದೆ. ಗುಟ್ಕಾವನ್ನು ತಿನ್ನಲು ಪ್ಯಾಕೆಟನ್ನು ಹರಿದು, ಅದರ ಕವರನ್ನು ಎಲ್ಲೆಂದರಲ್ಲಿ ಎಸೆದು ಬಿಡುವ ಗುಟ್ಕಾ ಪ್ರಿಯರು ಅದನ್ನು ಖರೀದಿಸಿದ ಅಂಗಡಿಯವರು ಇರಿಸಲಾದ ಬುಟ್ಟಿಯಲ್ಲಿ ಎಸೆದರೆ ನಗರ ಸ್ವಚ್ಛ ಮಾಡುವ ಪೌರ ಕಾರ್ಮಿಕರಿಗೆ ಸಹಾಯ ಮಾಡಿದಂತೆ ಮತ್ತು ನಮ್ಮ ಕರ್ತವ್ಯವನ್ನು ಮಾಡಿದಂತೆ ಆಗುತ್ತದೆ.

ಈ ಕುರಿತಾಗಿ ಚಿಂತನೆ ಮಾಡಬೇಕಾದ ವಿಚಾರವೇನೆಂದರೆ, ಗುಟ್ಕಾ ಸೇವಿಸುವವರ ಸಂಖ್ಯೆಯು ಹೇರಳವಾಗಿರುವುದರಿಂದ ಗುಟ್ಕಾದ ಕವರನ್ನು ಪ್ಲಾಸ್ಟಿಕ್ಸ್‌ನಲ್ಲಿ ತಯಾರಿಸದೇ, ಅದು ನೆಲಕ್ಕೆ ಬಿದ್ದಾಗ ಬಿಸಿಲು, ಮಳೆ, ಗಾಳಿಯ ಅಂಶಗಳಿಗೆ ಮೊಟಕಾಗಿ, ಕರಗುವ ಹಾಗೇ ಅಥವಾ ಮಣ್ಣಿಗೆ ಕೂಡಿಕೊಂಡರೆ ಮಣ್ಣಿನಲ್ಲಿ ಲೀನವಾಗುವ ಹಾಗೇ ಕಂಡುಹಿಡಿಯಬೇಕಾದ ಅನಿವಾರ್ಯತೆಯು ತುಂಬಾ ಅಗತ್ಯವಾಗಿ ಇದೆ.

ಬೆಂಗಳೂರಿನಲ್ಲಿ ಕಸ ವಿಲೇವಾರಿ ಸವಾಲಾಗಿ ಪರಿಣಮಿಸಿದೆ. ಹಾಗೆಯೇ ದಾವಣಗೆರೆ ನಗರವು ಬೆಳೆದಂತೆ ಕಸ ವಿಲೇವಾರಿಯ ಸಮಸ್ಯೆಯು ತಲೆದೋರಿದರೆ ಅಚ್ಚರಿ ಪಡುವಂತಿಲ್ಲ. ಆದಷ್ಟು ಮಟ್ಟಿಗೆ ಅಂಗಡಿಗಳಿಂದ ಆಹಾರ ಪದಾರ್ಥಗಳನ್ನು ತರುವಾಗ ಬಟ್ಟೆಯ ಚೀಲಗಳನ್ನು ತೆಗೆದುಕೊಂಡು ಹೋಗೋಣ. ಹೀಗೆ ಸಣ್ಣ ಸಣ್ಣ ವಿಚಾರಗಳನ್ನು ಪ್ರತಿ ದಿನ ಪಾಲಿಸಿದರೆ ಮಾತ್ರ ಪರಿಸರ ದಿನಾಚರಣೆಗೆ ನಿಜವಾದ ಅರ್ಥ ಬರುತ್ತದೆ.

- **ವೈ.ವಿ. ಭಟ್**, ವಕೀಲರು, ಎಸ್.ಪಿ.ಎಸ್. ನಗರ, ದಾವಣಗೆರೆ.

## ಖುಷಿ ನೀಡಿದ ಆರ್‌ಜಿ ಬರಹ

**ಮಾನ್ಯರೇ,**

ಆರ್.ಜಿ.ಹಳ್ಳಿ ನಾಗರಾಜ್ ಅವರು ದಿವಂಗತ ಹನಗವಾಡಿ ಸಿದ್ದವೀರಪ್ಪ ಅವರ 116ನೇ ವರ್ಷದ ಸ್ಮರಣೆ ನಿಮಿತ್ತವಾಗಿ ಬರೆದ ಬರಹ ಓದಿದಾಗ ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ ವಾಸಿ ಆಗಿರುವ ನನಗೆ ತುಂಬಾ ಖುಷಿ ಆಯ್ತು. ರೈತಪರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜನಸಾಮಾನ್ಯರ ಸೇವೆ ಮಾಡಿದವರು. ಹೀಗಾಗಿ, ಅವರೊಬ್ಬ ಪ್ರಾಮಾಣಿಕ ರಾಜಕಾರಣಿಗಳಲ್ಲೊಬ್ಬರು.

ಅಂದಹಾಗೆ, ಅವರು 1906 ರಲ್ಲಿ ಜನ್ಮನೀಡಿದ್ದಾರೆ. ಹಾಗೆಯೇ ಬ್ಯಾಂಕಿಂಗ್ ಕ್ಷೇತ್ರದ ಕೆನರಾ ಬ್ಯಾಂಕ್ ಸಹಾ 1906 ರಲ್ಲಿ ಸ್ಥಾಪನೆ ಆಗಿ ಈ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿದ ನೌಕರರು ಸಿದ್ದವೀರಪ್ಪ ಬಡಾವಣೆಯಲ್ಲಿ ವಾಸಿಸುತ್ತಿರುವುದು ಒಂದು ವಿಶೇಷ ಎಂದು ಹೇಳ ಬಯಸುತ್ತೇನೆ.

**ರಘುನಾಥರಾವ್ ತಾಪ್ಸೆ**, ನಿವೃತ್ತ ಬ್ಯಾಂಕ್ ಅಧಿಕಾರಿ, ದಾವಣಗೆರೆ.

## 19 ಗ್ರಾ.ಪಂಗಳಿಂದ ವಿದ್ಯುತ್ ಶುಲ್ಕ ಬಾಕಿ : ಮೊತ್ತ ಪಾವತಿಗೆ ಗಡುವು

ದಾವಣಗೆರೆ, ಜೂ. 16- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಮೇ-22 ರ ಅಂತ್ಯಕ್ಕೆ ಬೆಸ್ಕಾಂ ದಾವಣಗೆರೆ ವಿಭಾಗದ ಗ್ರಾಮೀಣ ಉಪ ವಿಭಾಗ ವ್ಯಾಪ್ತಿಯಲ್ಲಿನ 19 ಗ್ರಾಮ ಪಂಚಾಯತಿ ವ್ಯಾಪ್ತಿಗೊಳಪಡುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಬಾಕಿ ಮೊತ್ತವನ್ನು ಏಳು ದಿನಗಳೊಳಗಾಗಿ ಪಾವತಿಸುವಂತೆ ಬೆಸ್ಕಾಂ ಸೂಚಿಸಿದೆ.

ವಿದ್ಯುತ್ ಶುಲ್ಕ ಬಾಕಿ ಮೊತ್ತ ಪಾವತಿಸದೇ ಇದ್ದಲ್ಲಿ ವಿದ್ಯುತ್ ಸ್ಥಾವರಗಳ ಕ್ರೋಢೀಕರಿಸಿದ ವಿದ್ಯುತ್ ಬಾಕಿ ಮೊತ್ತವನ್ನು ಗ್ರಾ.ಪಂ. ಪಿಡಿಓ ಕಚೇರಿಯ ಆರ್.ಆರ್. ಖಾತೆಗೆ ವರ್ಗಾವಣೆ ಮಾಡಿ, ವಿದ್ಯುತ್ ಕಡಿತಗೊಳಿಸಲಾಗುವುದು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಆಗುವ ತೊಂದರೆಗೆ ಬೆಸ್ಕಾಂ ಗ್ರಾಮೀಣ ಉಪ ವಿಭಾಗ ಜವಾಬ್ದಾರರಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಗ್ರಾಮೀಣ ಉಪ ವಿಭಾಗ ವ್ಯಾಪ್ತಿಯಲ್ಲಿನ ಎಲೆಬೇತೂರು, ಬಸವನಾಳ್, ಕಾಡಜ್ಜಿ, ಕಡ್ಲೇಬಾಳು, ಆವರಗೊಳ್ಳ, ಕಕ್ಕರಗೊಳ್ಳ, ಬೆಳವನೂರು, ಹೊನ್ನೂರು, ಐಗೂರು, ತೋಳಹುಣಸೆ, ಶಿರಮಗೊಂಡನಹಳ್ಳಿ, ಮುದಹದಡಿ, ಹದಡಿ, ಕೈದಾಳೆ, ಕನಗೊಂಡನಹಳ್ಳಿ, ಕುಕ್ಕುವಾಡ, ಲೋಕಿಕೆರೆ, ಮತ್ತಿ, ಶ್ಯಾಗಲೆ ಗ್ರಾ.ಪಂ. ಗಳಿಂದ 10.30 ಕೋಟಿ ರೂ. ಬಾಕಿ ಮೊತ್ತ, ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಶುಲ್ಕ ಬಾಕಿ 10.30 ಕೋಟಿ ಇದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ಪಂಚಮಸಾಲಿ ಸಮಾಜದ ಜಗದ್ಗುರುಗಳ ನೇತೃತ್ವದಲ್ಲಿ ಮನವಿ



ಹರಿಹರ,ಜೂ.16- ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ-2ಎ ಯಲ್ಲಿ ಮೀಸಲಾತಿಯನ್ನು ಕಲ್ಪಿಸುವ ನಿಟ್ಟಿನಲ್ಲಿ ಕಾಲಮಿತಿಯಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಹರಿಹರ ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಮಠಾಧೀಶರುಗಳ ನಿಯೋಗ ಇಂದು ರಾಜ್ಯ ಹಿಂದುಳಿದ ಆಯೋಗದ ಅಧ್ಯಕ್ಷರಾದ ಜಯಪ್ರಕಾಶ್ ಹೆಗ್ಡೆ ಅವರಿಗೆ ಮನವಿ ಸಲ್ಲಿಸಿದರು.

ಮಠಾಧೀಶರುಗಳ ನಿಯೋಗದಲ್ಲಿ ಪಂಚಮಸಾಲಿ ಮಠಾಧೀಶರುಗಳ ಒಕ್ಕೂಟದ ಸ್ವಾಮೀಜಿಗಳು, ಅಲಗೂರು-ಜಮಖಂಡಿ ಪಂಚಮಸಾಲಿ ಜಗದ್ಗುರು ಪೀಠದ ಡಾ.ಮಹಾದೇವ ಶಿವಾಚಾರ್ಯ ಸ್ವಾಮೀಜಿ, ವಕೀಲರಾದ ಬಿ.ಎಸ್.ಪಾಟೀಲ ಹಾಗೂ ಪಂಚಮಸಾಲಿ ಮುಖಂಡರುಗಳು ಉಪಸ್ಥಿತರಿದ್ದರು.

ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2 ಎ ಗೆ ಸೇರ್ಪಡೆ ಮಾಡುವ ನಿಟ್ಟಿನಲ್ಲಿ ಈಗಾಗಲೇ ಪ್ರಕ್ರಿಯೆ ಪ್ರಾರಂಭವಾಗಿದೆ. ಆದರೆ ಈ ಪ್ರಕ್ರಿಯೆಯು ನಿಧಾನಗತಿಯಲ್ಲಿ ಸಾಗುತ್ತಿದ್ದು, ಸಮುದಾಯ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಲವಾರು ಅವಕಾಶಗಳನ್ನು ಕಳೆದು ಕೊಳ್ಳುತ್ತಿದೆ. ಸರ್ಕಾರ ಕೂಡಾ ಆಯೋಗದ ವರದಿ ಯನ್ನು ಕಾತುರತೆಯಿಂದ ಎದುರು ನೋಡುತ್ತಿದೆ.

ಆಯೋಗದ ವರದಿಯನ್ನು ಕಾಲಮಿತಿಯಲ್ಲೇ ಸರ್ಕಾರಕ್ಕೆ ಸಲ್ಲಿಸುವುದು ಬಹಳ ಅವಶ್ಯಕ ವಾಗಿದೆ. ಈಗಾಗಲೇ ಸುಮಾರು ಜಿಲ್ಲೆಗಳ ಸಮೀಕ್ಷೆ ನಡೆಸಿರುವುದು ನಮಗೆ ತಿಳಿದಿದೆ. ಈ ಪ್ರಕ್ರಿಯೆಯನ್ನು ತೀವ್ರಗೊಳಿಸಿ ತ್ವರಿತವಾಗಿ ಹಾಗೂ ಪೂರಕವಾಗಿ ವರದಿಯನ್ನು ಸಲ್ಲಿಸಿ ಎನ್ನುವ ಮನವಿಯನ್ನು ನಾವುಗಳು ಆಯೋಗಕ್ಕೆ ಸಲ್ಲಿಸಿದ್ದೇವೆ. ಇದಕ್ಕೆ ಆಯೋಗ ಪೂರಕವಾಗಿ ಸ್ಪಂದಿಸಿದೆ. ವರದಿಯನ್ನು ಕೊಟ್ಟ ಮೇಲೆ ಅದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಯಾವುದೇ ಗೊಂದಲ ಇಲ್ಲದೆ ಇರುವಂತಹ ಕಾನೂನಾತ್ಮಕ ವಾಗಿರುವ ವರದಿ ಸಲ್ಲಿಸಲಿದ್ದಾರೆ ಎನ್ನುವ ಭರವಸೆ ನಮಗೆ ದೊರಕಿದೆ ನಿಯೋಗ ತಿಳಿಸಿದೆ.

## ಎಸ್ಸೆಸ್ ಜನ್ಮ ದಿನ: ಹೆಚ್‌ಐವಿ ಸೋಂಕಿತ ಮಕ್ಕಳಿಗೆ ವೈದ್ಯಕೀಯ ಸಲಕರಣೆ ವಿತರಣೆ



ದಾವಣಗೆರೆ, ಜೂ.16- ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ 92 ನೇ ಜನ್ಮ ದಿನದ ಪ್ರಯುಕ್ತ ಹೆಚ್‌ಐವಿ ಸೋಂಕಿತ ಮಕ್ಕಳಿಗೆ ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ನೇತೃತ್ವದಲ್ಲಿ ವೈದ್ಯಕೀಯ ಉಪಕರಣಗಳನ್ನು ನೀಡಲಾಯಿತು.

ನಗರದ ಬಿಐಇಟಿ ರಸ್ತೆಯಲ್ಲಿನ ಎಂಸಿಸಿ 'ಬಿ' ಬ್ಲಾಕ್‌ನ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ನಡೆದ ಸಮಾರಂಭದಲ್ಲಿ ಹಾಸ್ಪಿಟಲ್ ಬೆಡ್, ಬೆಡ್, ಸ್ಟೆತೋಸ್ಕೋಪ್, ಬಿಪಿ ಪರೀಕ್ಷಿಸುವ ಪರಿಕರ, ಆಕ್ಸಿಮೀಟರ್ ಸೇರಿದಂತೆ ಹಲವು ವೈದ್ಯಕೀಯ ಉಪಕರಣಗಳನ್ನು ವಿಬಿಪಿ ಫೌಂಡೇಶನ್‌ಗೆ ಹಸ್ತಾಂತರಿಸಲಾಯಿತು.

ಈ ವೇಳೆ ಮಾತನಾಡಿದ ಮಂಜುನಾಥ್ ಗಡಿಗುಡಾಳ್, ಎಸ್ಸೆಸ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಹೆಚ್‌ಐವಿ ಸೋಂಕಿತ ಮಕ್ಕಳ ಅನುಕೂಲಕ್ಕಾಗಿ ವೈದ್ಯಕೀಯ ಸಲಕರಣೆಗಳನ್ನು ನೀಡಿದ್ದೇವೆ. ಈ ಮೂಲಕ ಅರ್ಥಪೂರ್ಣವಾಗಿ ಹುಟ್ಟುಹಬ್ಬ ಆಚರಿಸಿದ್ದೇವೆ ಎಂಬ ಧನ್ಯತಾಭಾವ ಇದೆ ಎಂದು ಹೇಳಿದರು.

ವಿಬಿಪಿ ಫೌಂಡೇಶನ್ ಶಿವಕುಮಾರ್ ಮಾತನಾಡಿದರು. ಇದಕ್ಕೂ ಮುನ್ನ ಅಯ್ಯಪ್ಪ ಸ್ವಾಮಿಗೆ ಎಸ್ಸೆಸ್ ಹುಟ್ಟುಹಬ್ಬಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಸಾಮಾಜಿಕ ಕಾರ್ಯಕರ್ತರಾದ ಬಿ.ಹೆಚ್. ಪರಶುರಾಮಪ್ಪ, ಕಾಂಗ್ರೆಸ್ ಮುಖಂಡರಾದ ಆಲೂರು ಜ್ಯೋತಿರ್ಲಿಂಗ, ಉಸ್ಮಾನ್ ಅಂಗಡಿ, ಭರತ್ ಮೈಲಾರಿ, ಮನು, ಉತ್ತರ ಕಾಂಗ್ರೆಸ್ ಅಧ್ಯಕ್ಷ ನವೀನ್ ಎಂ. ನಲವಡಿ, ದುಗ್ಗಳ್ಳಿ ಶಿವಕುಮಾರ್, ಆರ್.ಜಿ. ಧನೇಶ್, ಅಯ್ಯನಹಳ್ಳಿ ಮಹಾಬಲೇಶ್, ಮಾಗಾನಹಳ್ಳಿ ಯುವರಾಜ್, ಅಯ್ಯನಹಳ್ಳಿ ಮಹಾಬಲೇಶ್, ವಿನಯ್ ಜಿ. ಆರ್., ದಾನೇಶ್, ಶ್ರೀಕಂಠ, ಗುರುರಾಜ್, ಪ್ರಮೋದ್, ಪ್ರಜ್ವಲ್, ಬಸವರಾಜ್, ಶ್ರೀಕಂಠ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸಂಕಲ್ಪ ಸೇವಾ ಫೌಂಡೇಶನ್‌ನಿಂದ ಹೊಲಿಗೆ, ಬ್ಯೂಟಿಷಿಯನ್ ತರಬೇತಿ



ದಾವಣಗೆರೆ, ಜೂ.16- ಸಂಕಲ್ಪ ಸೇವಾ ಫೌಂಡೇಶನ್ ವತಿಯಿಂದ ಹೊಲಿಗೆ ತರಬೇತಿ, ಬ್ಯೂಟಿಷಿಯನ್ ತರಗತಿಗಳು ಹಾಗೂ ಮೆಹಂದಿ ಡಿಸೈನ್ ತರಬೇತಿ ನಡೆಸಲಾಯಿತು.

ನಗರದ ಮೇಕ್ ಓವರ್ ಬ್ಯೂಟಿ ಸ್ಟುಡಿಯೋದಲ್ಲಿ ನಡೆದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ಸಂಕಲ್ಪ ಸೇವಾ ಫೌಂಡೇಷನ್ ಅಧ್ಯಕ್ಷ ಮಹಾಂತೇಶ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿ ಅನಿಲ್ ಕುಮಾರ್ ಬಿ. ರಾಯ್ಕರ್, ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ಮಾಜಿ ಮಹಾಪೌರ ಎಸ್.ಟಿ. ವೀರೇಶ್, ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಆಗಮಿಸಿದ್ದರು.

ಸಂಕಲ್ಪ ಸೇವಾ ಫೌಂಡೇಷನ್ ಮಹಾ ಪೋಷಕರಾದ ಡಾ. ಮಲ್ಲಿಕಾರ್ಜುನಪ್ಪ, ಜಿಲ್ಲಾ ಯೋಗ ಒಕ್ಕೂಟಕದ ವಾಸುದೇವ ರಾಯ್ಕರ್, ಪ್ರಕಾಶ್ ಉತ್ತಂಗಿ, ನಾಗರಾಜ್ ಕೆ.ಟಿ., ನಿರಂಜನ ಸ್ವಾಮಿ, ಮುರುಗೇಶ್, ಪರಶುರಾಮ್ ಹಾಗೂ ತರಬೇತುದಾರರಾದ ಪರಶುರಾಮ್, ಶ್ರೀಮತಿ ಲಕ್ಷ್ಮಿ, ಸಂಸ್ಥೆ ಸದಸ್ಯರಾದ ಬಕ್ಕೇಶ್, ಬಾದಾಮಿ ಜಯಣ್ಣ , ಗಿರೀಶ್ ಮಾಗಾನಹಳ್ಳಿ, ಕಿರಣ್‌ಕುಮಾರ್ ಎ.ಸಿ., ಚಿದಾನಂದ ಎಂ.ಹೆಚ್., ಮಲ್ಲಿಕಾರ್ಜುನ್ ಎಂ. , ಡಾ. ಶ್ರೀನಿವಾಸ, ಪ್ರಶಾಂತ ಕುಮಾರ್, ಎ.ಎಂ. ಶ್ರೀನಿವಾಸ, ನಾಗರಾಜ್ ಕುರ್ಡೇಕರ್, ಡಾ. ಹನುಮಂತಯ್ಯ, ಎಸ್.ಕೆ. ರಾಜು, ಮಾಲಾ ಎಂ, ಯಾಸ್ಮಿನ್ ಬಾನು, ರೋಜಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಒಂದು ಕೇಳಿದರೆ ಐದು ಕೊಡುವ ಎಟಿಎಂ!

**ತಾಂತ್ರಿಕ ಸಮಸ್ಯೆಯಿಂದಾಗಿ ಐದು ಪಟ್ಟು ಹೆಚ್ಚು ಹಣ ಕೊಡುವ ಖಾಸಗಿ ಬ್ಯಾಂಕ್ ಎಟಿಎಂಗೆ ಮುಗಿಬಿದ್ದ ಜನ**

ನಾಗಪುರ, ಜೂ. 16 – ಮಹಾರಾಷ್ಟ್ರದ ನಾಗಪುರ ಜಿಲ್ಲೆಯ ಎ.ಟಿ.ಎಂ. ಒಂದು 500 ರೂ. ಬಿಡಿಸಿಕೊಳ್ಳಲು ಹೋದರೆ 2,500 ರೂ. ನೀಡಿದ ಘಟನೆ ನಡೆದಿದೆ.

ಖಾಸಗಿ ಬ್ಯಾಂಕ್‌ಗೆ ಸೇರಿದ ಎ.ಟಿ.ಎಂ. ಒಂದು ದಾಖಲಿಸಿದ್ದಕ್ಕಿಂತ ಐದು ಪಟ್ಟು ಹೆಚ್ಚು ಹಣ ನೀಡುತ್ತಿದ್ದುದು ಕಂಡು ಬಂದಿದೆ. ಕ್ಷಣಾರ್ಧದಲ್ಲಿ ಸುದ್ದಿ ಕಾಡ್ಗಿಚ್ಚಿನಂತೆ ಹರಡಿದೆ. ನಾಗಪುರದಿಂದ 30 ಕಿ.ಮೀ. ದೂರದಲ್ಲಿರುವ ಖಪರ್ಖೆಡ ನಗರದ ಈ ಎ.ಟಿ.ಎಂ.ಗೆ ಜನ ಮುತ್ತಿಕೊಂಡು ಹಣ ಬಿಡಿಸಿಕೊಳ್ಳಲು ನೂಕಾಟ ನಡೆಸಿದ್ದಾರೆ.

ಇದನ್ನು ಗಮನಿಸಿದ ಬ್ಯಾಂಕ್ ಗ್ರಾಹಕರೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಸ್ಥಳಕ್ಕೆ ಧಾವಿಸಿದ ಪೊಲೀಸರು, ಎಟಿಎಂ ಬಂದ್ ಮಾಡಿ ಬ್ಯಾಂಕಿನವರಿಗೆ ಮಾಹಿತಿ ನೀಡಿದ್ದಾರೆ. ತಾಂತ್ರಿಕ ಕಾರಣದಿಂದಾಗಿ ಎಟಿಎಂ ಹೆಚ್ಚು ಹಣ ನೀಡುತ್ತಿತ್ತು. 100 ರೂ. ನೋಟು ಇಡಬೇಕಾದ ಟ್ರೇನಲ್ಲಿ 500 ರೂ. ನೋಟುಗಳನ್ನು ಇಟ್ಟಿದ್ದೇ ಅವಾಂತರಕ್ಕೆ ಕಾರಣ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ ಯಾವುದೇ ದೂರನ್ನು ದಾಖಲಿಸಿಲ್ಲ.

## ಸೈನ್ಯದ ರೆಜಿಮೆಂಟ್‌ಗಳಲ್ಲಿ ಬದಲಾವಣೆ ಇಲ್ಲ

**ಅಗ್ನಿವೀರರಿಂದ ರೆಜಿಮೆಂಟ್‌ಗಳು ಬಲ**

**ವಿಶ್ವದಾದ್ಯಂತ ಸೈನ್ಯಗಳಲ್ಲಿ ಯುವಕರಿಗೇ ಹೆಚ್ಚು ಆದ್ಯತೆ**

**ಹಲವು ದೇಶಗಳಲ್ಲಿ ಅಲ್ಪಾವಧಿ ಸೈನಿಕರ ಪದ್ಧತಿ ಈಗಾಗಲೇ ಜಾರಿಯಲ್ಲಿದೆ**

**ನಾಲ್ಕು ವರ್ಷದ ನಂತರ ಅಗ್ನಿವೀರರು ದೇಶಕ್ಕೆ ಕಂಟಕ ಎನ್ನುವುದು ಸೈನ್ಯಕ್ಕೆ ಅವಮಾನಿಸಿದಂತೆ**

ನವದೆಹಲಿ, ಜೂ. 16 – ಸೈನ್ಯದ ನೇಮಕಕ್ಕೆ ಅಗ್ನಿಪಥ ಯೋಜನೆ ಜಾರಿಗೆ ತಂದ ನಂತರ ರೆಜಿಮೆಂಟ್ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಮೊದಲ ವರ್ಷಕ್ಕೆ ಸೇರ್ಪಡೆಯಾಗುವ ಸೈನಿಕರ ಸಂಖ್ಯೆ, ಒಟ್ಟು ಸೈನಿಕರ ಶೇ.3ರಷ್ಟು ಮಾತ್ರ ಎಂದು ಸರ್ಕಾರಿ ಮೂಲಗಳು ತಿಳಿಸಿವೆ.

ಸೈನ್ಯದಲ್ಲಿ ಯುವಕರ ಸಂಖ್ಯೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಅಗ್ನಿಪಥ ಯೋಜನೆ ರೂಪಿಸಿದೆ. ನೂತನ ಯೋಜನೆಯಿಂದ ಸೈನ್ಯಕ್ಕೆ ಯುವಕರು ಸೇರ್ಪಡೆಯಾಗು ವುದು ಈಗಿನಕ್ಕಿಂತ ಮೂರು ಪಟ್ಟು ಹೆಚ್ಚಾಗಲಿದೆ.

ಅಗ್ನಿಪಥ ಯೋಜನೆಯಿಂದ ಹಲವಾರು ರೆಜಿಮೆಂಟ್‌ಗಳಲ್ಲಿ ಬದಲಾವಣೆಯಾಗಲಿದೆ ಎಂಬ ಕಳವಳ ಕೇಳಿ ಬಂದಿತ್ತು. ಆದರೆ, ಈಗಿರುವ ರಾಜಪೂತ್, ಜಾಟ್ ಹಾಗೂ ಸಿಖ್ ಸೇರಿದಂತೆ ಯಾವುದೇ ರೆಜಿಮೆಂಟ್‌ಗಳಲ್ಲಿ ಬದಲಾವಣೆಯಾಗುವುದಿಲ್ಲ. ಅತ್ಯುತ್ತಮ ಅಗ್ನಿವೀರರನ್ನು ಆಯ್ಕೆ ಮಾಡಿ ಈ ರೆಜಿಮೆಂಟ್‌ಗಳಿಗೆ ಸೇರ್ಪಡೆ ಮಾಡಿ ಅವುಗಳನ್ನು ಬಲಗೊಳಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಹಲವಾರು ದೇಶಗಳಲ್ಲಿ ಈಗಾಗಲೇ ಅಲ್ಪಾವಧಿ ನೇಮಕ ಇದೆ. ಅಲ್ಪಾವಧಿ ನೇಮಕ ಸಾಬೀತಾಗಿರುವ ಪದ್ಧತಿಯಾಗಿದೆ ಎಂದೂ ಮೂಲಗಳು ತಿಳಿಸಿವೆ. ವಿಶ್ವದೆಲ್ಲೆಡೆ ಸೈನ್ಯಗಳು ಯುವಕರನ್ನು ಅವಲಂಬಿಸಿವೆ. ನೂತನ ಯೋಜನೆಯಿಂದ ದೀರ್ಘಾವಧಿಯಲ್ಲಿ ಶೇ.50ರಷ್ಟು ಯುವ ಹಾಗೂ ಶೇ.50ರಷ್ಟು ಅನುಭವಿ ಭದ್ರತಾ ಸಿಬ್ಬಂದಿ ಸಿಗಲಿದ್ದಾರೆ. ಅನುಭವಿಗಳನ್ನು ಉಸ್ತುವಾರಿ ಶ್ರೇಣಿಗಳಿಗೆ ತರಲಾಗುವುದು ಎಂದು ಮೂಲಗಳು ಹೇಳಿವೆ.

ಕಳೆದ ಎರಡು ವರ್ಷಗಳಲ್ಲಿ ಸೈನಿಕ ಪಡೆಗಳ ಅಧಿಕಾರಿಗಳ ಜೊತೆ ವ್ಯಾಪಕ ಚರ್ಚೆ ನಡೆಸಿದ ನಂತರ ಹೊಸ ಪದ್ಧತಿ ಜಾರಿಗೆ ತರಲಾಗಿದೆ.

ಅಗ್ನಿವೀರರು ಸೈನಿಕ ಕಾರ್ಯನಿರ್ವಹಣೆ ಮುಗಿಸಿ ಬಂದ ನಂತರ ಸಮಾಜಕ್ಕೆ ಕಂಟಕವಾಗಲಿದ್ದಾರೆ ಎಂಬ ಆರೋಪಗಳಲ್ಲಿ ಹುರುಳಿಲ್ಲ. ಇದು ಭಾರತೀಯ ಸೈನಿಕ ಪಡೆಗಳ ಮೌಲ್ಯ ಹಾಗೂ ತಾತ್ವಿಕತೆಗೆ ಮಾಡುವ ಅವಮಾನ. ನಾಲ್ಕು ವರ್ಷಗಳ ಕಾಲ ದೇಶಕ್ಕೆ ಬದ್ಧವಾಗಿರುವವರು, ಜೀವನದ ಉಳಿದ ಅವಧಿಯಲ್ಲೂ ದೇಶಕ್ಕೆ ಬದ್ಧವಾಗಿರಲಿದ್ದಾರೆ ಎಂದವರು ಹೇಳಿದ್ದಾರೆ.

ಸಾವಿರಾರು ಜನರು ಸೈನ್ಯದಿಂದ ನಿವೃತ್ತರಾಗಿದ್ದಾರೆ. ಅವರಲ್ಲಿ ಯಾರೂ ಸಮಾಜ ವಿರೋಧಿ ಶಕ್ತಿಗಳ ಜೊತೆ ಕೈ ಜೋಡಿಸಿರುವ ಉದಾಹರಣೆ ಇಲ್ಲ ಎಂದು ಮೂಲಗಳು ತಿಳಿಸಿವೆ.

## ಮಾಸ್ಟರ್ ಕಾರ್ಡ್ ಮೇಲಿನ ನಿರ್ಬಂಧ ರದ್ದು

ಮುಂಬೈ, ಜೂ. 16 – ಮಾಸ್ಟರ್‌ಕಾರ್ಡ್ ಮೇಲೆ ಕಳೆದ ವರ್ಷ ಹೇರಲಾಗಿದ್ದ ನಿರ್ಬಂಧವನ್ನು ರಿಸರ್ವ್ ಬ್ಯಾಂಕ್ ತೆರವುಗೊಳಿಸಿದೆ. ಮಾಸ್ಟರ್‌ಕಾರ್ಡ್ ಅನ್ನು ಹೊಸ ಗ್ರಾಹಕರಿಗೆ ವಿತರಿಸಲು ಅವಕಾಶ ಮಾಡಿಕೊಟ್ಟಿದೆ.

ಮಾಹಿತಿ ಸಂಗ್ರಹ ನಿಯಮಗಳ ಹಿನ್ನೆಲೆಯಲ್ಲಿ ಮಾಸ್ಟರ್‌ಕಾರ್ಡ್ ಹೊಸ ಡೆಬಿಟ್, ಕ್ರೆಡಿಟ್ ಇಲ್ಲವೇ ಪ್ರೀಪೇಯ್ಡ್ ಕಾರ್ಡ್ ನೀಡದಂತೆ ರಿಸರ್ವ್ ಬ್ಯಾಂಕ್ ಕಳೆದ ವರ್ಷ ಜುಲೈನಲ್ಲಿ ಆದೇಶ ಹೊರಡಿಸಿತ್ತು. ಮಾಹಿತಿ ಸಂಗ್ರಹ ಮಾರ್ಗಸೂಚಿ ಪಾಲಿಸಿದ ನಂತರ ನಿರ್ಬಂಧ ತೆರವುಗೊಳಿಸಲಾಗಿದೆ.

## ಹೊನ್ನಾಳಿಗೆ ಮತ್ತೆ ಡಿಸಿ ಭೇಟಿ



ಹೊನ್ನಾಳಿ, ಜೂ. 16 - ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಂಗಳವಾರ ಹೊನ್ನಾಳಿ ತಾಲ್ಲೂಕು ಕಚೇರಿಗೆ ಆಗಮಿಸಿ, ಸಾರ್ವಜನಿಕರ ಸಮಸ್ಯೆ ಆಲಿಸಿ ಕ್ರಮ ಕೈಗೊಳ್ಳುವಂತೆ ತಾಲ್ಲೂಕು ಆಡಳಿತಕ್ಕೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕಿನ ಲಿಂಗಾಪುರ ಗ್ರಾಮದ ಮಹಿಳೆ ಪತಿಯೊಂದಿಗೆ ಬಂದು ಜಿಲ್ಲಾಧಿಕಾರಿಗೆ ಕೈಮುಗಿದು ಜಮೀನು ಸಮಸ್ಯೆಯ ಪರಿಹಾರ ದೊರಕಿಸಿ ಕೊಡುವಂತೆ ಮನವಿ ಮಾಡಿದ ಪ್ರಸಂಗ ನಡೆಯಿತು.

ಹೊನ್ನಾಳಿ ತಾಲ್ಲೂಕು ಕಚೇರಿಗೆ ಜಿಲ್ಲಾಧಿಕಾರಿಗಳ ಈ ವಾರದ 2ನೇ ಭೇಟಿ ಇದಾಗಿದೆ. ನಾನು ಕಳೆದ ಬಾರಿ ಹೊನ್ನಾಳಿ ತಾಲ್ಲೂಕು ಕಚೇರಿಗೆ ಭೇಟಿ ನೀಡಿದಾಗ ನೂರಾರು ಜನ ಬಂದು ನನ್ನ ಸುತ್ತ ನಿಂತು ಸಮಸ್ಯೆ ಹೇಳಿಕೊಳ್ಳುತ್ತಿದ್ದರು. ಆದರೆ ಇಂದು ಎರಡನೇ ಬಾರಿ ಭೇಟಿ ನೀಡಿದಾಗ ಕೇವಲ ಐದಾರು ಜನರು ಬಿಟ್ಟರೆ ಯಾರೂ ನನ್ನ ಬಳಿ ಬರುತ್ತಿಲ್ಲ. ಅಂದರೆ ಅಷ್ಟರ ಮಟ್ಟಿಗೆ ನಮ್ಮ ಅಧಿಕಾರಿಗಳು ಜನರಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಕಚೇರಿಯಲ್ಲಿಯೇ ಜೆರಾಕ್ಸ್ ಯಂತ್ರವನ್ನು ಸ್ಥಾಪಿಸಲಾಗಿದ್ದು ಜೆರಾಕ್ಸ್‌ಗಾಗಿ ಹೊರಗಡೆ ಹೋಗುತ್ತಿದ್ದ ಕಡತಗಳು ಇಂದು ಕಚೇರಿಯಲ್ಲಿಯೇ ಜೆರಾಕ್ಸ್ ಮಾಡಿಕೊಡಲಾಗುತ್ತಿದೆ. ಈ ಹಿಂದೆ 42 ದಿನಗಳಿಗೆ ಮ್ಯೂಟೇಶನ್ ಕೊಡುವ ವ್ಯವಸ್ಥೆ ಇತ್ತು, ಇದೀಗ 32 ದಿನಗಳಿಗೆ ಅದನ್ನು ಕೊಡಿಸುವ ಪ್ರಯತ್ನಗಳು ನಡೆದಿವೆ ಎಂದರು. ತಹಶೀಲ್ದಾರ್ ಎಚ್.ಜೆ. ರಶ್ಮಿ ಪುರಸಭೆ ಮುಖ್ಯಾಧಿಕಾರಿ ವೀರಭದ್ರಯ್ಯ ಹಾಜರಿದ್ದರು.

## ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಸಿಎಂ ಭರವಸೆ

**ರಾಣೇಬೆನ್ನೂರು ತಾಲ್ಲೂಕಿನ ಕಾರ್ಯಕ್ರಮದಲ್ಲಿ ಶಾಸಕ ಯತ್ನಾಳ್**



ರಾಣೇಬೆನ್ನೂರು, ಜೂ. 16- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಯ ಭರವಸೆ ನೀಡಿದ್ದಾರೆ ಎಂದು ಶಾಸಕ ಬಸವನಗೌಡ ಪಾಟೀಲ ಯತ್ನಾಳ ಹೇಳಿದರು.

ರಾಣೇಬೆನ್ನೂರು ತಾಲ್ಲೂಕಿನ ಬೇಲೂರು ಗ್ರಾಮದಲ್ಲಿ ಮುಖ್ಯ ಮಂತ್ರಿ ಮನೆ ಎದುರು ಇಂದು ನಡೆದ ಧರಣಿಯ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ವಾಮೀಜಿಗಳು, ಸಮಾಜದ ಮುಖಂಡರು, ಪರಿಣಿತರು ಹಾಗೂ ಅಧಿಕಾರಿಗಳನ್ನೊಳಗೊಂಡ ಸಭೆಯನ್ನು ನಡೆಸಿರುವ ಮುಖ್ಯಮಂತ್ರಿಗಳು ಮೀಸಲಾತಿಗೆ ಒಲವು ತೋರಿಸಿದ್ದಾರೆ. ದಿನಾಂಕ 22 ರಂದು ಇನ್ನೊಂದು ಸಭೆ ನಡೆಸಿ, ಅಂದು ಅಂತಿಮ ತೀರ್ಮಾನದ ಜೊತೆ ಘೋಷಣೆ ಮಾಡುವ ಭರವಸೆ ನಮಗೆ ದೊರಕಿದೆ ಎಂದು ಶಾಸಕ ಯತ್ನಾಳ್ ಹೇಳಿದರು.

ವಾಲ್ಮೀಕಿ ಹಾಗೂ ಹಾಲುಮತಸ್ಥ ಸಮಾಜಗಳ ಮೀಸಲಾತಿ ಕುರಿತಂತೆ ಸಹ ಪಂಚಮಸಾಲಿ ಸಮಾಜ ಅವರ ಪರವಾಗಿಯೂ ಒತ್ತಾಯಿಸುತ್ತದೆ ಎಂದು ಹೇಳಿದ ಯತ್ನಾಳ್ ಅವರು, ಮೀಸಲಾತಿ ಪಡೆಯುವುದು ನಮ್ಮ ಹಕ್ಕು. ಇಲ್ಲಿ ಶಿಗ್ಗಾವ ಧರಣಿಯಿಂದ ಹಿಂದೆ ಸರಿಯುವ ಪ್ರಶ್ನೆ ಉದ್ಭವಿಸಲಾರದು ಎಂದರು.

ಕೂಡಲಸಂಗಮ ಮಠದ ಸ್ವಾಮೀಜಿ ಐಷಾರಾಮಿ ಬದುಕು ನಡೆಸುವವರಲ್ಲ. ಸಮಾಜದ ಕಟ್ಟಕಡೆಯ ಮನುಷ್ಯನ ಬದುಕು ಹಸನು ಮಾಡುವ ಸ್ವಾಮೀಜಿ, ಹಣ ತಿಂದು ಶೀತಲ ಗೃಹದಿಂದ ಮಂತ್ರಿಗಳ ಮನೆಗೆ ತೆರಳಿ ಮನವಿ ಸಲ್ಲಿಸುವ ಜಾಯಮಾನ ಈ ಸ್ವಾಮೀಜಿದಲ್ಲ. ಹಳ್ಳಿ, ಹಳ್ಳಿಗಳಿಗೆ ಸಂಚರಿಸಿ ಸಮಾಜದ ಕಡುಬಡವನ ಮನೆಗೆ ತೆರಳಿ ಅವನ ಕಷ್ಟ-ಸುಖಗಳಿಗೆ ಸ್ಪಂದಿಸುತ್ತಾರೆಂದು ಹೇಳಿ, 27 ಕ್ಕೆ ಅಧಿಕ ಸಂಖ್ಯೆಯಲ್ಲಿ ಶಿಗ್ಗಾಂವಿಗೆ ಬಂದು ಧರಣಿಯಲ್ಲಿ ಭಾಗವಹಿಸುವಂತೆ ಯತ್ನಾಳ ಮನವಿ ಮಾಡಿದರು.


### ಸೋನಿಯಾ ಜೊತೆ ಬಿಎಸ್‌ವೈ ಒಳಗೆ..

ಭಾರತದಿಂದ ತರಿಸಿದ ಗೊಂಬೆಗಳನ್ನು ಮಾರಾಟ ಮಾಡುತ್ತಿದ್ದ ತಂದೆಯ ಮಗಳು ಸೋನಿಯಾ ಗಾಂಧಿ ಬಳಿ ಸಾವಿರಾರು ಕೋಟಿ ಹಣ ಎಲ್ಲಿಂದ ಬರುತ್ತೆ.

ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರದ ವಿರುದ್ಧ ಆಂದೋಲನ ಮಾಡುವ ಪ್ರಧಾನಿ ಮೋದಿ ಕೇವಲ ಕಾಂಗ್ರೆಸ್ ಮುಖಂಡರಲ್ಲ, ಬಿಜೆಪಿಯ ಭ್ರಷ್ಟರ ಬಗ್ಗೆ ಸಹ ಕಾನೂನು ಕ್ರಮ ಜರುಗಿಸುವರು ಎಂದು ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಹೇಳಿದರು.

ಅವರು ಸಭೆಗೂ ಮೊದಲು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು.

ಸೋನಿಯಾಗಾಂಧಿ ಅಥವಾ ಕಾಂಗ್ರೆಸ್‌ನ ಗುರಿಯಾಗಿಟ್ಟು ಕೊಳ್ಳದ ಇಡಿ, ದುಬೈ ಹಾಗೂ ಮಾರಿಸಸ್ ಗೆ ಹೆಚ್ಚು ಹೋಗುವ ಯಡಿಯೂರಪ್ಪ ಹಾಗೂ ಅವರ ಮಕ್ಕಳ ಮೇಲು ಕ್ರಮ ಜರುಗಿಸಿ ಅವರನ್ನು ಜೈಲಿಗೆ ಕಳಿಸಲಿದೆ ಎಂದರು.




## ಆನಗೋಡು ವ್ಯಾಪ್ತಿ ಪಂಚಾಯ್ತಿಗಳ ಕರೆಂಟ್ ಬಿಲ್ ಬಾಕಿ 7.11 ಕೋಟಿ

ದಾವಣಗೆರೆ, ಜೂ.16- ಆನಗೋಡು ಉಪ ವಿಭಾಗ ವ್ಯಾಪ್ತಿಗೆ ಬರುವ 22 ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದ ಬೀದಿ ದೀಪ ಹಾಗೂ ಕುಡಿಯುವ ನೀರು ಸರಬರಾಜು ಸ್ಥಾವರಗಳ ಒಟ್ಟು ವಿದ್ಯುತ್ ಬಾಕಿ ಮೊತ್ತ 7.11 ಕೋಟಿ ರೂ.ಗಳಿದ್ದು ಹಾಗೂ ಮೇ 2022ರ ಅಂತ್ಯಕ್ಕೆ ಆನಗೋಡು ಉಪ ವಿಭಾಗದ ವ್ಯಾಪ್ತಿಯ 22 ಗ್ರಾಮ ಪಂಚಾಯತಿಗಳ ವ್ಯಾಪ್ತಿಗೆ ಒಳಪಡುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಬಾಕಿ ಮೊತ್ತವನ್ನು ಏಳು ದಿನಗಳ ಒಳಗಾಗಿ ಪಾವತಿಸಬೇಕೆಂದು ತಿಳಿಸಲಾಗಿದೆ. ವಿದ್ಯುತ್ ಶುಲ್ಕ ಬಾಕಿ ಮೊತ್ತ ಪಾವತಿಸದೇ ಇದ್ದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ವಿದ್ಯುತ್ ಸ್ಥಾವರಗಳ ಕ್ರೋಢೀಕರಿಸಿದ ವಿದ್ಯುತ್ ಬಾಕಿ ಮೊತ್ತವನ್ನು ಗ್ರಾಪಂ ಪಿಡಿಒ ಕಚೇರಿಯ ಆರ್‌ಆರ್ ಸಂಖ್ಯೆಗೆ ವರ್ಗಾವಣೆ ಮಾಡಿ ವಿದ್ಯುತ್ ಕಡಿತಗೊಳಿಸಲಾಗುವುದು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಆಗುವ ತೊಂದರೆಗೆ ಬೆಸ್ಕಾಂ ಜವಾಬ್ದಾರಿ ಆಗುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ನ್ಯಾಮತಿಯಲ್ಲಿ ನಾಳೆ ವಿದ್ಯುತ್ ಅದಾಲತ್

ನ್ಯಾಮತಿ, ಜೂ. 16- ಬೆವಿಕಂ ನ್ಯಾಮತಿ ಉಪ ವಿಭಾಗದ ವ್ಯಾಪ್ತಿಗೆ ಬರುವ ಹೊಸ ಮಳಲಿ ಗ್ರಾಮದಲ್ಲಿ ನಾಡಿದ್ದು ದಿನಾಂಕ 18 ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಬಿ.ಕೆ. ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದುಕೊರತೆಗಳ ಬಗ್ಗೆ ವಿದ್ಯುತ್ ಅದಾಲತ್ ಮಾಸಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

## ಮಾತಾ ಅನ್ನಪೂರ್ಣೇಶ್ವರಿ ಅಮ್ಮನವರಿಗೆ ಬಂಗಾರದ ಕುಂಕುಮ ಸೇವೆ



ದಾವಣಗೆರೆ, ಜೂ. 16- ನಗರದ ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಮೊನ್ನೆ ನಡೆದ ಕಾರ ಹುಣ್ಣಿಮೆಯ ವಿಶೇಷ ಪೂಜಾ ಕಾರ್ಯಕ್ರಮದ ಸಂದರ್ಭದಲ್ಲಿ ವಕೀಲರಾದ ಶ್ರೀಮತಿ ಜಿ.ಸಿ. ವಸುಂಧರ, ಜಿ.ಸಿ. ತನಿಶ್ ಅವರು ಸೇವಾರ್ಥವಾಗಿ ಬಂಗಾರದ ಕುಂಕುಮ ಹಾಗೂ ಹೂವಿನ ಅಲಂಕಾರದ ಸೇವೆ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ 15ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಕಾಂಗ್ರೆಸ್ ಮುಖಂಡ ಉಮೇಶ್, ದೇವರಾಜ ಅರಸು ಬಡಾವಣೆ ಎ ಬ್ಲಾಕ್ ನಾಗರಿಕರ ಹಿತರಕ್ಷಣಾ ಸಮಿತಿ ಪ್ರಧಾನ ಕಾರ್ಯದರ್ಶಿ ವೀರಯ್ಯ ಸ್ವಾಮಿ, ಅರ್ಚಕರಾದ ಸುಬ್ರಹ್ಮಣ್ಯ ಭಟ್ಟರು ಉಪಸ್ಥಿತರಿದ್ದರು.


**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್ 96861 95327 ಚಾಮರಾಜಪೇಟೆ, ದಾವಣಗೆರೆ - 577 001.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte